ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

25 ಏಪ್ರಿಲ್ 2026 ಶನಿವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 46 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿ ವಿರುದ್ಧ ನಡೆದ ಐಪಿಎಲ್ ಪಂದ್ಯದಲ್ಲಿ ಶತಕ (100 ರನ್) ಗಳಿಸಿದ ಗುಜರಾತ್ ಟೈಟನ್ಸ್ ತಂಡದ ಸಾಯಿ ಸುದರ್ಶನ್... ರಾಯಲ್ ಚಾಲೆಂಜರ್ಸ್ ಬೆಂಗಳೂರಿಗೆ 204 ರನ್ ಗುರಿ...





ಉತ್ತಮ ಫಲಿತಾಂಶದ ಗುಟ್ಟು ಇದೀಗ ರಟ್ಟು ! » 2





7 ಸಂಸದರೊಂದಿಗೆ ಬಿಜೆಪಿ ಸೇರಿ ರಾಘವ್ ಛಡ್ಡಾ » 3





ಕಟ್ಟಡಗಳ ಎತ್ತರ ನಿರ್ಬಂಧ : ತೆರವಿಗೆ ಮನವಿ » 4


# ಒಳಮೀಸಲಾತಿ ಗೊಂದಲಕ್ಕೆ ತೆರೆ

## ಎಡಗೈ, ಬಲಗೈ ಸಮುದಾಯಕ್ಕೆ ತಲಾ ಶೇ.5.25 | ಅಲೆಮಾರಿ ಜಾತಿಗಳಿಗೆ ಶೇ 4.5 ರಷ್ಟು ಮೀಸಲು

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ಬಗೆಹರಿಯದೇ ಕಗ್ಗಂಟಾಗಿ ಉಳಿದಿದ್ದ ಪರಿಶಿಷ್ಟ ಜಾತಿಯಲ್ಲಿನ ಒಳಮೀಸಲಾತಿ ಗೊಂದಲಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ವಿಶೇಷ ಸಚಿವ ಸಂಪುಟ ಸಭೆ ಶುಕ್ರವಾರ ಮಹತ್ವದ ನಿರ್ಣಯ ಕೈಗೊಂಡಿದೆ. ಆ ಪ್ರಕಾರ ಎಡಗೈ ಹಾಗು ಬಲಗೈ ಸಮುದಾಯಕ್ಕೆ ತಲಾ ಶೇ.5.25 ರಷ್ಟು ಮತ್ತು ಇತರರಿಗೆ ಶೇ.4.5 ರಷ್ಟು ಒಳ ಮೀಸಲಾತಿ ನೀಡಲು ಒಮ್ಮತದ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿದ್ದರಾಮಯ್ಯ ಅವರು, ಮೀಸಲಾತಿಗೆ ಸಂಬಂಧಿಸಿದಂತೆ ತಾಂತ್ರಿಕ ಸಮಿತಿ ಮಾಡಬೇಕೆಂದು ಕಳೆದ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಲಾಗಿತ್ತು. ಆ ಸಮಿತಿ ಶೇ.15 ರಷ್ಟು ಮೀಸಲಾತಿ ಪ್ರಮಾಣದಲ್ಲಿ ದಲಿತ ಎಡಗೈ ಸಮುದಾಯಕ್ಕೆ ಶೇ.5.3, ಬಲಗೈ ಸಮುದಾಯಕ್ಕೆ ಶೇ.5.3 ಹಾಗು ಇತರರಿಗೆ ಶೇ.4.4 ಹಂಚಿಕೆ ಮಾಡುವಂತೆ ಶುಕ್ರವಾರ ವರದಿ ನೀಡಿತ್ತು. ಆದರೆ, ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆದ ಬಳಿಕ ಮೀಸಲಾತಿ ಪ್ರಮಾಣವನ್ನು ಶೇ.5.25, 5.25 ಹಾಗು ಶೇ.4.5 ಹಂಚಿಕೆ ಮಾಡಲು ಎಲ್ಲಾ ಸದಸ್ಯರೂ ಸರ್ವಾನುಮತದ ಒಪ್ಪಿಗೆ ನೀಡಿದ್ದಾರೆ. ಯಾವುದೇ ಅಪಸ್ವರ ವ್ಯಕ್ತವಾಗಿಲ್ಲವೆಂದು ಹೇಳಿದರು.



ಶೇ.50 ಮೀಸಲಾತಿಗೆ ಅನುಗುಣವಾಗಿ ಒಳಮೀಸಲಾತಿ ನಿಗದಿ ಮಾಡಲಾಗಿದೆ. ಶೇ.56 ಮೀಸಲಾತಿ ಮಾಡಬೇಕೆಂಬುದು ನಮ್ಮ ಸಂಕಲ್ಪ. ಆದರೆ, ಈ ವಿಚಾರ ನ್ಯಾಯಾಲಯದಲ್ಲಿ ಇರುವುದರಿಂದ, ಅದು ಇತ್ಯರ್ಥವಾಗುವವರೆಗೆ ಶೇ.6 ಅನ್ನು ಬ್ಯಾಕ್ ಲಾಗ್ ಎಂದು ಪರಿಗಣಿಸಲಾಗುವುದು. ನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿ ಮುಂದಿನ ತೀರ್ಮಾನ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

ರೋಸ್ಟರ್ ಬಿಂದು ಗೊಂದಲವನ್ನು ಸರಿಪಡಿಸಲು ಎಲ್ಲರಿಗೂ ಒಪ್ಪಿತವಾಗುವ ತೀರ್ಮಾನ ತೆಗೆದುಕೊಂಡಿದ್ದೇವೆ. ಆ ಪ್ರಕಾರ, 1 ಅಥವಾ 2 ಹುದ್ದೆಗಳು ಇದ್ದ ಸಂದರ್ಭದಲ್ಲಿ ಅವುಗಳನ್ನು ಎಸ್‌ಸಿ ಜನರಲ್ ಎಂದು ಮಾಡಲಾಗುವುದು. ಎ,ಬಿ,ಸಿ ವರ್ಗದವರು ಆ ಹುದ್ದೆಗೆ ಸ್ಪರ್ಧಿಸಬಹುದು.

> ಒಳಮೀಸಲಾತಿ ವಿಚಾರಕ್ಕೆ ಸಂಬಂಧಿಸಿದಂತೆ ಹಲವು ವಾರಗಳಿಂದ ಚರ್ಚೆ ನಡೆದಿತ್ತು. ರಾಷ್ಟ್ರಕ್ಕೆ ಮಾದರಿ ಆಗಬಲ್ಲ ಮಹತ್ವವಾದ ಜನರ ಬದುಕಿಗೆ ವಿಶೇಷ ತಿರುವನ್ನು ನೀಡುವ ತೀರ್ಮಾನ ತೆಗೆದುಕೊಂಡಿದ್ದೇವೆ. ರೋಸ್ಟರ್ ವಿಚಾರದಲ್ಲಿ ಗೊಂದಲ ಸೃಷ್ಟಿ ಆಗಿತ್ತು. ಸೂಕ್ತ ಪರಿಹಾರ ಮಾರ್ಗ ಕಂಡುಕೊಳ್ಳಲು ಮುಖ್ಯಮಂತ್ರಿ ಯಶಸ್ವಿಯಾಗಿದ್ದಾರೆ.
>
> -ಹೆಚ್.ಕೆ.ಪಾಟೀಲ್, ಕಾನೂನು ಸಚಿವ

ಅಲ್ಲದೇ ಸಿ ವರ್ಗದ ಹುದ್ದೆಗಳಲ್ಲಿ ಶೇ.20 ರಷ್ಟು ಹುದ್ದೆಗಳನ್ನು 59 ಅಲೆಮಾರಿ ಜಾತಿಗಳಿಗೆ ಮೀಸಲಾಗಿ ಇಡಲಾಗುವುದೆಂದು ವಿವರಿಸಿದರು.

**ಹಂತ ಹಂತವಾಗಿ ಹುದ್ದೆ ಭರ್ತಿ**

ನ್ಯಾಯಾಲಯದ ಮುಂದಿನ ಆದೇಶದವರೆಗೆ ಇದೇ ಅನುಪಾತ ಅನ್ವಯವಾಗಲಿದೆ. ನೇಮಕಾತಿ ವೇಳೆ ಪ್ರವರ್ಗ ಎ-5.25, ಬಿ-5.25, ಸಿ-4.5 ಮೀಸಲಾತಿಯೊಂದಿಗೆ ಅಧಿಸೂಚನೆಯನ್ನು ಮತ್ತೊಮ್ಮೆ ಪ್ರಕಟ ಮಾಡುತ್ತೇವೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುತ್ತೇವೆಂದರು.

**56,432 ಹುದ್ದೆ ಭರ್ತಿಗೆ ಅಧಿಸೂಚನೆ**

ಒಳ ಮೀಸಲಾತಿ ವಿಚಾರ ತೀರ್ಮಾನ ಆಗಿರುವುದರಿಂದ ವಿವಿಧ ಇಲಾಖೆಗಳ 56,432 ಹುದ್ದೆಗಳ ಭರ್ತಿಗೆ ಶನಿವಾರವೇ ಅಧಿಸೂಚನೆ ಹೊರಡಿಸಲಾಗುವುದು. ಉಳಿದ ಹುದ್ದೆಗಳನ್ನು ಹಂತಹಂತವಾಗಿ ಪ್ರತಿ ವರ್ಷ ಭರ್ತಿ ಮಾಡಲಾಗುವುದು. ಈ ಹುದ್ದೆಗಳ ಭರ್ತಿ ವೇಳೆ ಇದೇ ಮೀಸಲಾತಿ ಅನುಪಾತ ಅನ್ವಯವಾಗಲಿದೆ. ವಿಶೇಷ ಸಂಪುಟ ಸಭೆಯಲ್ಲಿ ನಿರ್ಧರಿಸಿದ ಅನುಪಾತ ಮುಂದುವರಿಯಲಿದೆ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

# ಆನೆ ಕಾರ್ಯಪಡೆಗೆ 13 ಹೊಸ ವಾಹನಗಳ ಬಲ

## ವಾಕಿಟಾಕಿ, ಧ್ವನಿವರ್ಧಕ ಅಳವಡಿಕೆ: ಅರಣ್ಯ ಸಚಿವ ಹಸ್ತಾಂತರ

• ಪ್ರಜೋದಯ ವರದಿ

**ಹಾಸನ :** ಜಿಲ್ಲೆಯಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಕಾಡಾನೆಗಳ ಹಾವಳಿ ನಿಯಂತ್ರಣಕ್ಕಾಗಿ ಸರ್ಕಾರ ಜಿಲ್ಲಾ ಆನೆ ಕಾರ್ಯಪಡೆ (ಇಟಿಎಫ್)ಗೆ 13 ಹೊಸ ವಾಹನಗಳನ್ನು ನೀಡುವ ಮೂಲಕ ಕಾರ್ಯಪಡೆಗೆ ಬಲ ತುಂಬಿದೆ.

ಜಿಲ್ಲೆಯ ಜನರು ಕಳೆದ ಎರಡು ದಶಕಗಳಿಂದ ಕಾಡಾನೆಗಳ ಹಾವಳಿಯಿಂದ ತತ್ತರಿಸುತ್ತಿದ್ದಾರೆ. ಜೀವ ಹಾನಿ, ಬೆಳೆ ನಾಶ, ಮನೆಗಳ ಮೇಲೆ ದಾಳಿ ನಡುವೆ ಗ್ರಾಮೀಣ ಭಾಗದ ಜನರ ಬದುಕು ಆತಂಕದಲ್ಲಿ ಸಾಗುತ್ತಿದೆ. ಇತ್ತೀಚೆಗಷ್ಟೇ ಒಂದು ಪುಂಡಾನೆಯನ್ನು ಸೆರೆ ಹಿಡಿದು ಸ್ಥಳಾಂತರಿಸುವ ಜೊತೆಗೆ ಎರಡು ಹೆಣ್ಣಾನೆಗಳಿಗೆ ರೇಡಿಯೋ ಕಾಲರ್ ಅಳವಡಿಕೆ ಮಾಡಲಾಗಿದೆ. ಇದರ ಬೆನ್ನಲ್ಲೇ ಶುಕ್ರವಾರ ಸಚಿವ ಈಶ್ವರ ಖಂಡ್ರೆ ಅವರು ಬೆಂಗಳೂರು ಮಲ್ಲೇಶ್ವರದಲ್ಲಿರುವ ಅರಣ್ಯ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲೆಗೆ 13 ವಾಹನಗಳನ್ನು ಹಸ್ತಾಂತರಿಸಿದ್ದಾರೆ.

13 ವಾಹನಗಳ ಪೈಕಿ ಒಂದು ಸ್ಕಾರ್ಪಿಯೋ, ಎರಡು ಕ್ಯಾಂಪರ್ ವಾಹನಗಳು ಹಾಗು 10 ದ್ವಿಚಕ್ರ ವಾಹನಗಳೊಂದಿಗೆ ಕಾರ್ಯಪಡೆಗೆ ನೀಡಲಾಗಿದೆ. ಈ ವಾಹನಗಳಲ್ಲಿ ವಾಕಿಟಾಕಿ ಮತ್ತು ಧ್ವನಿವರ್ಧಕಗಳನ್ನು ಅಳವಡಿಸಲಾಗಿದೆ. ಆನೆಗಳು ಗ್ರಾಮಗಳತ್ತ ಚಲಿಸುವ ಮಾಹಿತಿ ಸಿಕ್ಕ ತಕ್ಷಣ ಸಿಬ್ಬಂದಿ ಗಸ್ತು ಹೆಚ್ಚಿಸಿ, ಸ್ಥಳೀಯರಿಗೆ ಮುನ್ನೆಚ್ಚರಿಕೆ ನೀಡಲು ಸಾಧ್ಯವಾಗಲಿದೆ. ಇದುವರೆಗೆ ಮಾಹಿತಿ ತಲುಪುವಲ್ಲಿ ವಿಳಂಬವಾಗುತ್ತಿದ್ದ ಸಮಸ್ಯೆಗೆ ಇದು ಪರಿಹಾರವಾಗಬಹುದೆಂಬ ನಿರೀಕ್ಷೆ ವ್ಯಕ್ತವಾಗಿದೆ.

ಸಕಲೇಶಪುರ, ಬೇಲೂರು, ಆಲೂರು, ಅರಕಲಗೂಡು ಭಾಗಗಳಲ್ಲಿ ಕಾಡಾನೆಗಳ ಹಾವಳಿ ಹೆಚ್ಚಿರು


» ನಾಲ್ಕನೇ ಪುಟದಲ್ಲಿ




**ಸಂಘರ್ಷ ನಿಯಂತ್ರಣಕ್ಕೆ ಕ್ರಮ: ಖಂಡ್ರೆ**

ಮಾನವ-ವನ್ಯಜೀವಿ ಸಂಘರ್ಷ ನಿಯಂತ್ರಣಕ್ಕೆ ಇದು ಹೊಸ ಉಪಕ್ರಮವಾಗಿದೆ. ಈ ಎಲ್ಲಾ ವಾಹನಗಳಿಗೆ ವಾಕಿಟಾಕಿ ಮತ್ತು ಧ್ವನಿವರ್ಧಕ ಅಳವಡಿಸಲಾಗಿದ್ದು, ಜಿಲ್ಲಾ ಆನೆ ಕಾರ್ಯಪಡೆ ಸಿಬ್ಬಂದಿ ವಾಹನಗಳಲ್ಲಿ ಗಸ್ತು ಮಾಡುತ್ತಾ, ಕಾಡಾನೆಗಳು ತೋಟ ಅಥವಾ ವಸತಿ ಪ್ರದೇಶಗಳ ಬಳಿ ಬಂದಾಗ ಸ್ಥಳೀಯರಿಗೆ ಧ್ವನಿವರ್ಧಕಗಳ ಮೂಲಕ ಎಚ್ಚರಿಕೆ ನೀಡುತ್ತಾರೆ. ಈ ವಾಹನಗಳನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ತನ್ನ ಸಿಎಸ್‌ಆರ್ ನಿಧಿಯಿಂದ ಅರಣ್ಯ ಇಲಾಖೆಗೆ ನೀಡಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ತಿಳಿಸಿದರು.

# ಡಾ. ರಾಜಕುಮಾರ್ ಕರ್ನಾಟಕದ ಆಸ್ತಿ: ಡಿ.ಸಿ.



• ಪ್ರಜೋದಯ ವರದಿ

**ಹಾಸನ:** ವರ ನಟ ಡಾ. ರಾಜಕುಮಾರ್ ಕೇವಲ ನಟರಾಗಿ ಮಾತ್ರವಲ್ಲದೆ ಭಾಷೆಗಾಗಿ ಸಕ್ರಿಯ ಹೋರಾಟ, ಚಲನಚಿತ್ರಗಳಲ್ಲಿ ಉತ್ತಮ ಸಂದೇಶ ನೀಡುವ ಮೂಲಕ ಮನೆ ಮಾತಾಗಿದ್ದಾರೆ. ಅವರು ಕರ್ನಾಟಕದ ಆಸ್ತಿ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಹೇಳಿದರು.

ನಗರದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು ಸಭಾಂಗಣದಲ್ಲಿ ಶುಕ್ರವಾರ ನಡೆದ ಡಾ. ರಾಜಕುಮಾರ್ ಅವರ 97ನೇ ಜನ್ಮ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಭಾಷೆ ಸಂಸ್ಕೃತಿ, ಕಲೆಗೆ ರಾಜಕುಮಾರ್ ಕೊಡುಗೆ ಅಪಾರ. ರಾಜಕುಮಾರ್ ಅವರ ಭಾಷೆಯ ಬಳಕೆಯಲ್ಲಿ ಸ್ಪಷ್ಟತೆ, ನಿಖರತೆ, ಅಭಿವ್ಯಕ್ತಿ, ಭಾವನೆಗಳನ್ನು ಗಮನಾರ್ಹ. ಅವರು ನಟಿಸಿರುವ ಸಿನಿಮಾಗಳು ಸಮಾಜಕ್ಕೆ ಉತ್ತಮ ಸಂದೇಶ ನೀಡಿದ್ದು, ಅನೇಕ ಜನರು ತಮ್ಮ ಜೀವನದಲ್ಲಿ ಬದಲಾವಣೆ ಕಂಡುಕೊಂಡಿದ್ದಾರೆಂದರು.

ಸರಳತೆ, ಸೌಜನ್ಯ ಮತ್ತು ಶಿಸ್ತಿನ ಮೂರ್ತ ರೂಪವಾಗಿದ್ದ ರಾಜಕುಮಾರ್ ಅವರ ಜೀವನ ಪ್ರತಿಯೊಬ್ಬರಿಗೂ ಸ್ಫೂರ್ತಿಯಾಗಿದೆ. ಮಹಾಕಲಾವಿದರಾಗುವುದು ಅವರ ಕಲೆಗಳ ಮೂಲಕ, ಮದ್ಯಪಾನ, ಧೂಮಪಾನದಂತಹ ದುಶ್ಚಟಗಳಿಗೆ ಒಳಗಾಗುವ ಪಾತ್ರಗಳಲ್ಲಿ ಅಭಿ


» ನಾಲ್ಕನೇ ಪುಟದಲ್ಲಿ


# ಜಿಲ್ಲೆಯ 261 ಗ್ರಾಮ ಪಂಚಾಯಿತಿಗೆ 3,541 ಸ್ಥಾನ ನಿಗದಿ

## ಕ್ಷೇತ್ರವಾರು ಮೀಸಲಾತಿ ಪ್ರಕಟ ಬಾಕಿ | ಚುನಾವಣೆಗೆ ಸಜ್ಜಾಗುತ್ತಿದೆ ಚುನಾವಣಾ ಆಯೋಗ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

ಹಾಸನ: ಗ್ರಾಮ ಪಂಚಾಯಿತಿ ಚುನಾವಣೆ ನಡೆಸಲು ಸಜ್ಜಾಗಿರುವ ರಾಜ್ಯ ಚುನಾವಣಾ ಆಯೋಗವು ರಾಜ್ಯದ ಎಲ್ಲಾ ಜಿಲ್ಲೆಗಳ ಗ್ರಾಮ ಪಂಚಾಯಿತಿ ಸದಸ್ಯ ಸ್ಥಾನಗಳ ಸಂಖ್ಯೆಯನ್ನು ನಿಗದಿ ಪಡಿಸಿ ಅಧಿಸೂಚನೆ ಹೊರಡಿಸಿದೆ. ಅದರಂತೆ ಜಿಲ್ಲೆಯ ಒಟ್ಟು 261 ಗ್ರಾಮ ಪಂಚಾಯಿತಿಗಳಿಗೆ 3,541 ಸ್ಥಾನಗಳನ್ನು ನಿಗದಿ ಮಾಡಲಾಗಿದೆ.

ಜನಸಂಖ್ಯೆಗೆ ಅನುಗುಣವಾಗಿ ಗ್ರಾಮ ಪಂಚಾಯಿತಿ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿ, ಕ್ಷೇತ್ರಗಳ ಮರು ವಿಂಗಡಣೆ ಮಾಡಲು ಕ್ಷೇತ್ರ ಮರು ವಿಂಗಡಣಾ ಆಯೋಗ ಸೂಚನೆ ನೀಡಿದ್ದರಿಂದ ಗ್ರಾಮ ಪಂಚಾಯಿತಿ ಸದಸ್ಯ ಸ್ಥಾನಗಳ ಸಂಖ್ಯೆಯನ್ನು ನಿಗದಿಪಡಿಸಲಾಗಿದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 5ರಡಿ ಹಾಗು 308 (ಇ)(ಎಫ್) ಪ್ರಕರಣದಡಿ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಜಿಲ್ಲೆಯ ಎಂಟು ತಾಲ್ಲೂಕುಗಳ ಗ್ರಾಮ ಪಂಚಾಯಿತಿ ಸದಸ್ಯರ ಸಂಖ್ಯೆಯನ್ನು ನಿಗದಿ ಪಡಿಸಿದೆ.




(ಜಿಲ್ಲೆಯ ಗ್ರಾಮ ಪಂಚಾಯಿತಿ ವಿವರ)

| ತಾಲ್ಲೂಕು | ಗ್ರಾ.ಪಂ.ಸಂಖ್ಯೆ | ಸದಸ್ಯರ ಸಂಖ್ಯೆ |
|---|---|---|
| ಆಲೂರು | 15 | 203 |
| ಅರಕಲಗೂಡು | 36 | 488 |
| ಅರಸೀಕೆರೆ | 44 | 639 |
| ಬೇಲೂರು | 37 | 423 |
| ಚನ್ನರಾಯಪಟ್ಟಣ | 41 | 626 |
| ಹಾಸನ | 36 | 496 |
| ಹೊಳೆನರಸೀಪುರ | 26 | 392 |
| ಸಕಲೇಶಪುರ | 26 | 275 |
| ಒಟ್ಟು | 261 | 3,541 |

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಜೊತೆಯಲ್ಲೇ ಗ್ರಾಮ ಪಂಚಾಯಿತಿ ಚುನಾವಣೆಯೂ ನಡೆಸಲಾಗುತ್ತದೆ ಎಂದು ಹೇಳಲಾಗಿತ್ತು. ಆದರೆ, ಗ್ರಾಮ ಪಂಚಾಯಿತಿ ಚುನಾವಣೆಯು ಪಕ್ಷದ ಚಿಹ್ನೆಯಲ್ಲಿ ನಡೆಯದ ಕಾರಣ ಯಾವುದೇ ಸಂದರ್ಭದಲ್ಲಿ ದಿನಾಂಕ ನಿಗದಿ ಪಡಿಸಿ ಚುನಾವಣೆ ನಡೆಸುವ ಸಾಧ್ಯತೆ ಇದೆ.

ಪಂಚಾಯತ್ ಕಾಯ್ದೆ ಪ್ರಕಾರ ಅವಧಿ ಮುಗಿದ ಗ್ರಾಮ ಪಂಚಾಯಿತಿಗಳಿಗೆ ಆರು ತಿಂಗಳೊಳಗೆ ಚುನಾವಣೆ ನಡೆಸುವುದು ಅನಿವಾರ್ಯವಾಗಿರುವ ಕಾರಣ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಗಳನ್ನು ಬದಿಗೊತ್ತಿ ಗ್ರಾಮ ಪಂಚಾಯಿತಿ ಚುನಾವಣೆ ನಡೆಸುವ ಸಾಧ್ಯತೆ ನಿಚ್ಚಳವಾಗಿದೆ.

ಇದರಿಂದಾಗಿ ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಸದಸ್ಯ ಸ್ಥಾನಗಳ ಸಂಖ್ಯೆಯನ್ನು ನಿಗದಿ ಪಡಿಸಿ ಅಧಿಸೂಚನೆ ಹೊರಡಿಸುವ ಜೊತೆಗೆ, ಏನಾದರೂ ವ್ಯತ್ಯಾಸವಿದ್ದಲ್ಲಿ ಆಕ್ಷೇಪಣೆ ಸಲ್ಲಿಸಲು ಶುಕ್ರವಾರದವರೆಗೂ ಅವಕಾಶ ನೀಡಲಾಗಿತ್ತು. ಇದರಿಂದಾಗಿ ಹಲವು ತಿಂಗಳಿನಿಂದ ಸ್ಥಳೀಯ ಸಮರ ಎದುರು ನೋಡುತ್ತಿರುವ ಹಳ್ಳಿಗಳಲ್ಲಿ ಸುಡು ಬಿಸಿಲಿನ ಜೊತೆಗೆ, ರಾಜಕೀಯ ಬಿಸಿಯೂ ಕಾವೇರಲಿದೆ.

ಕರ್ನಾಟಕದಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಸದಸ್ಯರ ಐದು ವರ್ಷಗಳ ಅವಧಿ ಮುಗಿದು ಆಡಳಿತಾಧಿಕಾರಿಗಳು ಐದು ವರ್ಷಗಳ ಕಾಲ ಕಾರ್ಯಭಾರ ನಡೆಸಿರುವುದು ದಾಖಲೆಯಾಗಿದೆ. ಗ್ರಾಮ ಪಂಚಾಯಿತಿ ಸದಸ್ಯರ ಅವಧಿಯು ಜನವರಿ ಅಂತ್ಯದಲ್ಲಿ ಮುಕ್ತಾಯವಾಗಿದೆ. ಪಂಚಾಯತ್ ರಾಜ್ ಕಾಯ್ದೆ ಪ್ರಕಾರ ಮೂರರಿಂದ 6 ತಿಂಗಳೊಳಗೆ ಚುನಾವಣೆ ನಡೆಸುವುದು ಆಯೋಗಕ್ಕೆ ಅನಿವಾರ್ಯವಾಗಿದೆ.

**ಮೀಸಲಾತಿ ಹಂಚಿಕೆ ಬಾಕಿ**

ಗ್ರಾಮ ಪಂಚಾಯಿತಿಗಳ ಜನಸಂಖ್ಯೆಗೆ ಅನುಗುಣವಾಗಿ ಸದಸ್ಯ ಸ್ಥಾನಗಳ ಸಂಖ್ಯೆಯನ್ನು ನಿಗದಿಪಡಿಸಿ ಆದೇಶ ಹೊರಡಿಸಲಾಗಿದೆ. ಆಕೇಪಣೆ ಸಲ್ಲಿಕೆಯ ಬಳಿಕ ಆಯಾಯ ಗ್ರಾಮ ಪಂಚಾಯಿತಿ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಶೇ.50ರಷ್ಟು ಮಹಿಳಾ ಮೀಸಲಾತಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರಗರ್ವ-ಎ, ಪ್ರವರ್ಗ ವರ್ಗ-ಬಿ, ಸಾಮಾನ್ಯ ಕ್ಷೇತ್ರಗಳಿಗೆ ಮೀಸಲಾತಿ ಹಂಚಿಕೆ ಮಾಡಬೇಕಾಗಿದೆ. ಈ ಮೀಸಲಾತಿ ಹಂಚಿಕೆ ಮಾಡುತ್ತಿದ್ದಂತೆ ಸ್ಥಳೀಯ ಸಮರಕ್ಕೆ ವೇದಿಕೆ ಸಜ್ಜಾಗುವುದು ನಿಶ್ಚಿತವಾಗಿದೆ.

**ಯಾವ್ಯಾವ ಗ್ರಾಮ ಪಂಚಾಯಿತಿಗೆ ಎಷ್ಟು ಸ್ಥಾನ**

ಆಲೂರು ತಾಲ್ಲೂಕಿನ ಬೈರಾಪುರ-15, ಹುಣಸವಳ್ಳಿ-13, ದೊಡ್ಡಕಣಗಾಲು-10, ಕಣತೂರು-12, ಮಡಬಲು-18, ಪಾಳ್ಯ-18, ಮಗ್ಗೆ-15, ಮಲ್ಲಾಪುರ-19, ಕಾರಗೋಡು-18,ಅಬ್ಬನ-8, ಕುಂದೂರು-6, ಕದಾಳು-13, ಗಂಜಿಗೆರೆ-10, ಹಂಚೂರು-11 ಸ್ಥಾನಗಳನ್ನು ನಿಗದಿ ಪಡಿಸಲಾಗಿದೆ.

ಅರಕಲಗೂಡು ತಾಲ್ಲೂಕಿನ ವಡ್ಡರಹಳ್ಳಿ-13, ಹೆಬ್ಬಾಲೆ-15, ಗಂಜಲಗೂಡು-13,ಬೈಚನಹಳ್ಳಿ-15, ಹೊನ್ನವಳ್ಳಿ-13, ಕತ್ತಿಮಲ್ಲೇನಹಳ್ಳಿ 9, ವಿಜಾಪುರ ಅರಣ್ಯ 15,


» ನಾಲ್ಕನೇ ಪುಟದಲ್ಲಿ


# ಕ್ಷೇತ್ರ ಅಭಿವೃದ್ಧಿಗೆ ಸರ್ಕಾರವಲ್ಲ ಇಚ್ಛಾಶಕ್ತಿ ಮುಖ್ಯ

## ಶಾಸಕ ಸುರೇಶ್ ವಿರುದ್ಧ ಬಿ.ಶಿವರಾಮ್ ಗುಡುಗು | ತಮ್ಮ ಆಡಳಿತಾವಧಿ ಪ್ರಸ್ತಾಪ

• ಪ್ರಜೋದಯ ವರದಿ

**ಹಳೇಬೀಡು:** ಕ್ಷೇತ್ರ ಅಭಿವೃದ್ಧಿಗೆ ನಮ್ಮ ಸರ್ಕಾರವೇ ಅಧಿಕಾರದಲ್ಲಿರಬೇಕೆನ್ನುವುದೆಲ್ಲಾ ಸುಳ್ಳು. ಇಚ್ಛಾಶಕ್ತಿ ಇದ್ದರೆ ಪ್ರತಿಪಕ್ಷದಲ್ಲಿದ್ದರೂ ಪರಿಣಾಮಕಾರಿ ಕೆಲಸ ಮಾಡಬಹುದೆಂದು ಮಾಜಿ ಸಚಿವ ಬಿ. ಶಿವರಾಮ್ ಅವರು ಶಾಸಕ ಹೆಚ್.ಕೆ.ಸುರೇಶ್ ಅವರಿಗೆ ತಿರುಗೇಟು ನೀಡಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಸರ್ಕಾರ ಅಧಿಕಾರದಲ್ಲಿ ಇಲ್ಲ, ನಾವು ವಿರೋಧ ಪಕ್ಷದಲ್ಲಿದ್ದೇವೆ, ಹೀಗಾಗಿ ಕೆಲಸ ಆಗುತ್ತಿಲ್ಲವೆಂದು ಶಾಸಕರು ಹೇಳುತ್ತಾರೆ. ಜೆಡಿಎಸ್ ಪಕ್ಷದ ಜೆ.ಹೆಚ್.ಪಟೇಲ್ ಮುಖ್ಯಮಂತ್ರಿಯಾಗಿದ್ದಾಗ ನಾನು ವಿರೋಧ ಪಕ್ಷದ ಶಾಸಕನಾಗಿದ್ದೆ. ಅಕ್ರಮ ಪಂಪ್ ಸೆಟ್ ಸಕ್ರಮ ಮಾಡುವಂತಹ ಪೈಲೆಟ್ ಸ್ಕೀಂ ಜಾರಿಗೆ ತರಲು ಹೋರಾಟ ಮಾಡಿದೆವು. ಪರಿಣಾಮವಾಗಿ ನಾನು ಶಾಸಕನಾಗಿದ್ದ ಗಂಡಸಿ ಕ್ಷೇತ್ರದಲ್ಲಿ 15,000 ಪಂಪ್ ಸೆಟ್ ಸಕ್ರಮ ಆದವು. ಇಚ್ಛಾಶಕ್ತಿ ಇದ್ದರೆ ವಿರೋಧ ಪಕ್ಷದಲ್ಲಿದ್ದರೂ ಜನಸೇವೆ ಮಾಡಬಹುದೆಂದರು.



ರೈತರ ಪರವಾಗಿ ಶಾಸಕರು ಧ್ವನಿ ಎತ್ತುತ್ತಿಲ್ಲ. ಹಳೇಬೀಡಿನ 66/11ಕೆವಿ ಸಾಮರ್ಥ್ಯದ ವಿದ್ಯುತ್ ವಿತರಣಾ ಕೇಂದ್ರದಲ್ಲಿ 1.125 ಕೆವಿ ಸಾಮರ್ಥ್ಯದ ಪರಿವರ್ತಕ ಸಾಮರ್ಥ್ಯ ಹೆಚ್ಚಿಸುವ ಕಾಮಗಾರಿಗೆ ಹಣ ಮಂಜೂರಾಗಿದೆ. ಕಚೇರಿಗಳಿಗೆ ಅಲೆದಾಡಿ ಹಣ ಮಂಜೂರು ಮಾಡಿಸಿದ್ದೇವೆ. ನಾವು ಮಾಡಿಸಿದ ಎಲ್ಲಾ ಕೆಲಸವನ್ನು ನಾವೇ ಮಾಡಿಸಿದ್ದೇವೆ ಎನ್ನುತ್ತಾರೆ. ಆದರೆ, ಪರಿವರ್ತಕ ಸಾಮರ್ಥ್ಯ ಹೆಚ್ಚಿಸುವ ಕಾಮಗಾರಿ ಕೈಗೊಳ್ಳಲು ಆಗುತ್ತಿಲ್ಲವೆಂದು ಶಿವರಾಮ್ ದೂರಿದರು.

ವಿದ್ಯುತ್ ಕೊರತೆಯಿಂದ ತಾಲ್ಲೂಕು ಬೆಂದು ಹೋಗುತ್ತಿದೆ. ಬಿಸಿಲಿನ ತಾಪದಲ್ಲಿ ಬೆಳೆಗಳು ನೀರಿಲ್ಲದೆ ಒಣಗುತ್ತಿವೆ. ಶಾಸಕರ ಇಚ್ಛಾಶಕ್ತಿಯ ಕೊರತೆಯಿಂದ ವಿದ್ಯುತ್ ವಿತರಣಾ ಕೇಂದ್ರಗಳ ಸಾಮರ್ಥ್ಯ ಹೆಚ್ಚಿಸುವ ಕಾಮಗಾರಿಗಳಾಗುತ್ತಿಲ್ಲವೆಂದು ಆರೋಪಿಸಿದರು.

ಚಿಕ್ಕಮಗಳೂರು-ಹಾಸನ ವಿದ್ಯುತ್ ಮಾರ್ಗದಲ್ಲಿ ರಾಮಚಂದ್ರಪುರದ ಬಳಿ ಹಳೇಬೀಡು ವಿದ್ಯುತ್ ಹಾಗು ಗಂಗೂರು ಕೇಂದ್ರಕ್ಕೆ ತಂತಿ


» ನಾಲ್ಕನೇ ಪುಟದಲ್ಲಿ


## ಪರೀಕ್ಷಾರ್ಥಿಗಳ ಜನಿವಾರ ತೆಗೆಸಿದ ಮೂವರ ಅಮಾನತು

• ಪ್ರಜೋದಯ ವರದಿ

**ಬೆಂಗಳೂರು:** ಕೋರಮಂಗಲದ ಕೃಪಾನಿಧಿ ಪದವಿ ಪೂರ್ವ ಕಾಲೇಜಿನ ಸಿಇಟಿ ಕೇಂದ್ರಕ್ಕೆ ಬಂದಿದ್ದ ಕೆಲ ಅಭ್ಯರ್ಥಿಗಳ ಜನಿವಾರ ತೆಗೆಸಿದ ಆರೋಪ ಕೇಳಿ ಬಂದಿದ್ದು, ಪ್ರಕರಣ ವಿವಾದದ ಸ್ವರೂಪ ಪಡೆಯುತ್ತಿದ್ದಂತೆ ತನ್ನ ಮೂವರು ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ.

ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳಿಗೆ ಪ್ರವೇಶ ಕಲ್ಪಿಸಲು ಏ.23, 24ರಂದು ಸಿಇಟಿ ನಡೆದಿದೆ. ಪರೀಕ್ಷೆ ಬರೆಯಲು ಕೃಪಾನಿಧಿ ಕಾಲೇಜಿಗೆ ಬಂದಿದ್ದ ಕೆಲ ವಿದ್ಯಾರ್ಥಿಗಳನ್ನು ಪ್ರವೇಶದ್ವಾರದಲ್ಲಿ ತಪಾಸಣೆ ನಡೆಸಿದ ಸಿಬ್ಬಂದಿ ಜನಿವಾರವನ್ನು ತೆಗೆಸಿದ್ದಾ ರೆಂದು ಕೆಲ ವಿದ್ಯಾರ್ಥಿಗಳು ಆರೋಪಿಸಿದ್ದರು.

## ಪುರಸಭೆ ಸದಸ್ಯ ಎ.ಆರ್.ಅಶೋಕ್ ಅನರ್ಹ

• ಪ್ರಜೋದಯ ವರದಿ

**ಬೇಲೂರು :** ಪುರಸಭೆ ಮಾಜಿ ಅಧ್ಯಕ್ಷ ಹಾಗು ಹಾಲಿ ಸದಸ್ಯ ಎ.ಆರ್. ಅಶೋಕ್ ಅವರ ಸದಸ್ಯತ್ವ ಅನರ್ಹಗೊಂಡಿದೆ.

ಪಕ್ಷ ವಿರೋಧಿ ಚಟುವಟಿಕೆ ಆರೋಪದಡಿ ಕಾಂಗ್ರೆಸ್ ಸದಸ್ಯತ್ವ ರದ್ದುಗೊಳಿಸುವಂತೆ ನ್ಯಾಯಾಲಯ ಮೆಟ್ಟಿಲೇರಿತ್ತು. ಕಾಂಗ್ರೆಸ್‌ನಿಂದ ಚುನಾಯಿತರಾಗಿದ್ದ ಅಶೋಕ್ ಅವರು ಅಧ್ಯಕ್ಷ ಸ್ಥಾನ ಬಿಟ್ಟುಕೊಡಲು ಹಿಂದೇಟು ಹಾಕಿದ್ದ ಹಿನ್ನಲೆಯಲ್ಲಿ ಸ್ವಪಕ್ಷಿಯರೇ ಅವಿಶ್ವಾಸ ನಿರ್ಣಯಕ್ಕೆ ಮುಂದಾಗಿ ಪಕ್ಷದಿಂದ ವಿಪ್ ಜಾರಿ ಮಾಡಲಾಗಿತ್ತು. ಅಶೋಕ್ ಅವರು ವಿಪ್ ಉಲ್ಲಂಘಿಸಿದ್ದರಿಂದ ಸದಸ್ಯತ್ವ ರದ್ದುಪಡಿಸಿ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.



ಪುರಸಭೆ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಪಕ್ಷದ ನಿರ್ದೇಶನದಂತೆ ನಡೆದುಕೊಳ್ಳದೆ ವಿಪ್ ಉಲ್ಲಂಘನೆ ದೃಢಪಟ್ಟ ಹಿನ್ನಲೆ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮ 1987 ಕಲಂ 3, 3(1)(ಬಿ), 4(1)(ಎ) ಮತ್ತು 4(1)(ಬಿ)ರ ಅನುಸಾರ ಸದಸ್ಯತ್ವ ರದ್ದುಗೊಳಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

## ಅಡ್ಡ ಬಂದ ಕಾಡಾನೆ : ಬೈಕ್‌ನಿಂದ ಬಿದ್ದು ಗಾಯ

• ಪ್ರಜೋದಯ ವರದಿ



**ಬೇಲೂರು:** ತಾಲ್ಲೂಕಿನ ಹಿರಿಗದ್ದೆ ಗ್ರಾಮದ ಬಳಿ ಬೈಕ್‌ನಲ್ಲಿ ತೆರಳುತ್ತಿದ್ದ ತಂದೆ-ಮಗ ಕಾಡಾನೆ ಕಂಡು ಗಾಬರಿಯಿಂದ ಬೈಕ್‌ನಿಂದ ಬಿದ್ದು ಗಾಯಗೊಂಡ ಘಟನೆ ಗುರುವಾರ ರಾತ್ರಿ ನಡೆದಿದೆ. ನೌಷದ್ ಪಾಷಾ (50) ಮತ್ತು ಅವರ ಪುತ್ರ ಮಹಮ್ಮದ್ ಫಾಝಿಲ್ (22) ಗಾಯಾಳುಗಳು.

ಇಬ್ಬರೂ ಬೈಕ್‌ನಲ್ಲಿ ಮನೆಗೆ ತೆರಳುತ್ತಿದ್ದ ವೇಳೆ ದಿಢೀರ್ ರಸ್ತೆಗೆ ಕಾಡಾನೆ ಅಡ್ಡ ಬಂದಿದೆ. ಗಾಬರಿಗೊಂಡು ನಿಯಂತ್ರಣ ತಪ್ಪಿ ಬೈಕ್‌ನಿಂದ ಕೆಳಗೆ ಬಿದ್ದಿದ್ದಾರೆ. ಗಾಯಗೊಂಡ ಇಬ್ಬರಿಗೆ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ಹಿಮ್ಸ್‌ಗೆ ರವಾನಿಸಲಾಯಿತು. ಅರಣ್ಯ ಇಲಾಖೆ ಅಧಿಕಾರಿಗಳು ಹಾಗು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಭಾಗದಲ್ಲಿ ಕಾಡಾನೆಗಳ ಸಂಚಾರ ಹೆಚ್ಚಿರುವುದರಿಂದ ಎಚ್ಚರಿಕೆಯಿಂದ ಸಂಚರಿಸುವಂತೆ ಅಧಿಕಾರಿಗಳು ಸೂಚಿಸಿದ್ದಾರೆ.

## ಎಸ್‌ಎಸ್‌ಎಲ್‌ಸಿ ಟಾಪ್ 5ರಲ್ಲಿ ಹಾಸನ | ಶಿಕ್ಷಣ ಇಲಾಖೆ ಪರಿಶ್ರಮಕ್ಕೆ ಪ್ರತಿಫಲ

# ಫಲಿತಾಂಶ ಚೇತರಿಕೆಗೆ ಕಾರಣವಾಯ್ತು ಫ್ರೈಡೇ ಫ್ರೆಂಡ್

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೊದಲ ಸ್ಥಾನ ಗಳಿಸಲೇಬೇಕೆಂದು ಶೈಕ್ಷಣಿಕ ವರ್ಷಾರಂಭದಿಂದ ಸಾಕಷ್ಟು ಶ್ರಮವಹಿಸಿದ್ದರ ಪರಿಣಾಮ ಜಿಲ್ಲೆ ರಾಜ್ಯಕ್ಕೆ ನಾಲ್ಕನೇ ಸ್ಥಾನ ಪಡೆದು ಟಾಪ್ 5ರಲ್ಲಿ ಸ್ಥಾನ ಪಡೆಯುವ ಮೂಲಕ ಉತ್ತಮ ಸಾಧನೆ ಮಾಡಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳ ಸಮಯೋಚಿತ ಪ್ರಯತ್ನ, ಶಿಕ್ಷಕರು ಹಾಗು ವಿದ್ಯಾರ್ಥಿಗಳ ಅವಿರತ ಶ್ರಮದಿಂದ ಈ ಸಾಧನೆ ಸಾಧ್ಯವಾಗಿದೆ. ಜೊತೆಗೆ ಜಿಲ್ಲಾಡಳಿತವೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ಫಲಿತಾಂಶ ಚೇತರಿಕೆಗೆ ಕಾರಣ ಎನ್ನಲಾಗುತ್ತಿದೆ.

ಫಲಿತಾಂಶ ಸುಧಾರಣೆಗೆ ಶಿಕ್ಷಣ ಇಲಾಖೆ ವಿಶೇಷ ಕಾರ್ಯಕ್ರಮಗಳನ್ನು ಹಾಕಿಕೊಂಡಿತ್ತು. ಕಳೆದ ವರ್ಷ 6ನೇ ಸ್ಥಾನಕ್ಕೆ ತೃಪ್ತಿಪಟ್ಟಿದ್ದ ಜಿಲ್ಲೆ ಈ ಬಾರಿ 2 ಸ್ಥಾನ ಮುಂದಕ್ಕೆ ಬರಲು ಸಾಕಷ್ಟು ಪರಿಶ್ರಮವಿದೆ. ವಿಶೇಷ ತರಗತಿ, ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ದತ್ತು ಸ್ವೀಕಾರ, ಮನೆ ಮನೆ ಭೇಟಿ, ಪೋಷಕರಿಗೆ ಜಾಗೃತಿ ಕಾರ್ಯಕ್ರಮ, ಪೂರ್ವ ಸಿದ್ಧತಾ ಪರೀಕ್ಷೆ ಹೀಗೆ ಹತ್ತು ಹಲವು ಕಾರ್ಯಕ್ರಮಗಳು ಫಲಿತಾಂಶಕ್ಕೆ ನೆರವಾಗಿವೆ.

ಪೂರ್ವ ಸಿದ್ಧತಾ ಪರೀಕ್ಷೆಯನ್ನು ಜ.5 ರಿಂದ 10ರ ವರೆಗೆ ನಡೆಸಲಾಗಿತ್ತು. 2ನೇ ಹಂತದ ಪರೀಕ್ಷೆ ಜ.27 ರಿಂದ ಫೆ.2ರ ವರೆಗೆ ಹಾಗು ಮೂರನೇ ಹಂತದ ಪರೀಕ್ಷೆ ಫೆ.23 ರಿಂದ 28ರ ವರೆಗೆ ನಡೆದಿದ್ದವು. ಎಸ್‌ಎಸ್‌ಎಲ್‌ಸಿ ಪರೀಕ್ಷಾ ಮಂಡಳಿ ಅಂತರ್ಜಾಲದಲ್ಲಿ ಸ್ಟೂಡೆಂಟ್ ಕಾರ್ನರ್ ಆ್ಯಪ್ ಮೂಲಕ ನಾಲ್ಕು ವರ್ಷದ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಬಿಡುಗಡೆಗೊಳಿಸಿತ್ತು. ಪ್ರತಿ ಪಠ್ಯವಾರು ಆಯ್ದ ಪ್ರಶ್ನಾವಳಿಗಳ ನೀಲನಕ್ಷೆಯನ್ನು ಒದಗಿಸಿದ್ದು ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ.

**ಡಿಸಿ ಕನಸಿನ ಫ್ರೈಡೇ ಫ್ರೆಂಡ್**

ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಕೈಗೊಂಡ ಫ್ರೈಡೇ ಫ್ರೆಂಡ್ ಕಾರ್ಯಕ್ರಮ ಪರಿಣಾಮ ಬೀರಿದೆ. ಶೈಕ್ಷಣಿಕ ವರ್ಷದ ಮಧ್ಯದಲ್ಲೇ ಈ ಯೋಜನೆ ಜಾರಿಗೊಳಿಸಿದ ಅವರು ಪ್ರತಿ ಮಂಗಳವಾರ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯಗಳಿಗೆ ಭೇಟಿ ವಿದ್ಯಾರ್ಥಿಗಳ ವ್ಯಾಸಂಗ ಪ್ರಗತಿ ಪರಿಶೀಲನೆ ನಡೆಸುತ್ತಿದ್ದರು. ಪೂರ್ವ ಸಿದ್ಧತಾ ಪರೀಕ್ಷೆ ಸಮಯದಲ್ಲೂ ಶಾಲೆಗಳಿಗೆ ಭೇಟಿ ನೀಡಿ ಸಲಹೆ ಸೂಚನೆಗಳನ್ನು ನೀಡುವ ಮೂಲಕ ಮಕ್ಕಳಲ್ಲಿ ಪರೀಕ್ಷಾ ಭಯ ಹೋಗಲಾಡಿಸಲು ಶ್ರಮಿಸಿದರು.

ಹಾಸ್ಟೆಲ್‌ಗೆ ಜಿಲ್ಲಾಧಿಕಾರಿ ಭೇಟಿಯಾಗುತ್ತಾರೆಂಬ ಕಾರಣದಿಂದ ವಾರ್ಡನ್‌ಗಳು ಸಹ ಮುತುವರ್ಜಿ ವಹಿಸಿ ಮಕ್ಕಳನ್ನು ಓದಿಗೆ ಪ್ರೇರೇಪಿಸುತ್ತಿದ್ದರು. ಜಿಲ್ಲಾಧಿಕಾರಿ ಅವರ ಭೇಟಿ ಕೇವಲ ಪಠ್ಯ ಪುಸ್ತಕ ಅಧ್ಯಯನಕ್ಕೆ ಮಾತ್ರವಲ್ಲದೆ ವ್ಯಕ್ತಿತ್ವ ವಿಕಸನಕ್ಕೂ ನೆರವಾಗಿದೆ ಎಂಬುದು ಅಷ್ಟೇ ಸತ್ಯ.

ಸಂಸದ ಶ್ರೇಯಸ್ ಪಟೇಲ್ ಸಭೆ ಸಂಸದ ಶ್ರೇಯಸ್ ಪಟೇಲ್ ಅವರು ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಹಾಸನ ಮೊದಲ ಸ್ಥಾನದಲ್ಲಿರಬೇಕೆಂದು ಅಧಿಕಾರಿಗಳಿಗೆ ನಿರ್ದೇಶನ ನೀಡುತ್ತಲೇ ಬಂದಿದ್ದರು. ಒಟ್ಟು ಮೂರು ಬಾರಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಭೆ ನಡೆಸಿದ್ದ ಅವರು ಶಿಕ್ಷಕರ ಸಮಸ್ಯೆಗಳನ್ನು ಆಲಿಸಿ ಪರಿಹಾರ ಕ್ರಮ ಕೈಗೊಂಡಿದ್ದರು. ಹೀಗಾಗಿ ಜಿಲ್ಲೆಯ ಎಲ್ಲಾ ಶಿಕ್ಷಕರು ಪರೀಕ್ಷೆಯನ್ನು ಗಂಭೀರವಾಗಿ ಪರಿಗಣಿಸಿದ್ದರು.



> ತಾಯಂದಿರ ಸಭೆ ಕರೆದು ಮಕ್ಕಳ ಶೈಕ್ಷಣಿಕ ಪ್ರಗತಿಯನ್ನು ಹೇಳುತ್ತಿದ್ದೆವು. ಗೈರು ಹಾಜರಾತಿಯನ್ನು ತಪ್ಪಿಸಿ ಪೋಷಕರ ಮನವೊಲಿಸಿ ಮಕ್ಕಳು ಶಾಲೆಗೆ ಬರುವಂತೆ ಎಚ್ಚರ ವಹಿಸಲಾಯಿತು. ಎಸ್‌ಎಸ್‌ಎಲ್‌ಸಿ ಪರೀಕ್ಷಾ ಮಂಡಳಿಯು ಪಠ್ಯವಾರು ಬ್ಲೂ ಪ್ರಿಂಟ್ ಕೊಟ್ಟಿದ್ದರಿಂದ ಅನುಕೂಲವಾಯಿತು. ನಾಲ್ಕು ಪೂರ್ವ ಸಿದ್ಧತಾ ಸಭೆಗಳು ಫಲಿತಾಂಶ ಚೇತರಿಕೆಗೆ ಕಾರಣವಾಗಿವೆ.
>
> -ಕೆ.ಎನ್.ಬಲರಾಮ್, ಡಿಡಿಪಿಐ

## ಜೂಜಾಟ: ವಿಷ ಸೇವಿಸಿದ್ದ ವ್ಯಕ್ತಿ ಸಾವು

• ಪ್ರಜೋದಯ ವರದಿ

**ಸಕಲೇಶಪುರ:** ಜೂಜಾಟದಲ್ಲಿ ನಿರಂತರ ಸೋಲಿನಿಂದ ಮನನೊಂದು ವಿಷ ಸೇವಿಸಿದ್ದ ವ್ಯಕ್ತಿ ಚಿಕಿತ್ಸೆ ಫಲಿಸದೆ ಮೃತಪಟ್ಟಿರುವ ಘಟನೆ ತಾಲ್ಲೂಕಿನ ದಬ್ಬೆಗದ್ದೆಯಲ್ಲಿ ನಡೆದಿದೆ.

ಗ್ರಾಮದ ರೇಣುಕಾಪ್ರಸಾದ್ (44) ಮೃತರು. ಅಂದರ್-ಬಾಹರ್ ಜೂಜಾಟದಲ್ಲಿ ನಿರಂತರ ಸೋಲು ಅನುಭವಿಸಿ ಹಣ ಕಳೆದುಕೊಂಡಿದ್ದ ಅವರು, ಮತ್ತೆ ಜೂಜಾಡಲು ಪ್ರಸನ್ನ ಎಂಬುವವರಿಂದ ಬಡ್ಡಿಗೆ ಸಾಲ ಪಡೆದಿದ್ದರೆಂದು ತಿಳಿದುಬಂದಿದೆ. ಆದರೆ ಪುನಃ ಜೂಜಾಟದಲ್ಲಿ ಸೋತು ಸಾಲದ ಒತ್ತಡಕ್ಕೆ ಒಳಗಾಗಿದ್ದರು. ಸಾಲದ ಹಣ ವಾಪಾಸ್ ನೀಡುವ ವೇಳೆ, ರೇಣುಕಾಪ್ರಸಾದ್ ಕುತ್ತಿಗೆಯಲ್ಲಿದ್ದ ಚಿನ್ನದ ಸರವನ್ನು ಸಾಲ ನೀಡಿದ್ದ ಪ್ರಸನ್ನ ಕಿತ್ತುಕೊಂಡಿದ್ದರು. ಈ ಹಿನ್ನಲೆಯಲ್ಲಿ ಮನನೊಂದು ಹತ್ತು ದಿನಗಳ ಹಿಂದೆ ವಿಷ ಸೇವಿಸಿದ್ದರು ಎನ್ನಲಾಗಿದೆ.



ಹಿಮ್ಸ್‌ಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಶುಕ್ರವಾರ ಮೃತಪಟ್ಟಿದ್ದಾರೆ. ಭತ್ತ ಹಾಗು ಕಾಫಿ ವ್ಯಾಪಾರ ಮಾಡಿಕೊಂಡಿದ್ದ ರೇಣುಕಾಪ್ರಸಾದ್ ಅವರ ನಿಧನದಿಂದ ಕುಟುಂಬದಲ್ಲಿ ದುಃಖ ಮಡುಗಟ್ಟಿದೆ. ಪ್ರಸನ್ನ ಅವರನ್ನು ನಗರಠಾಣೆ ಪೊಲೀಸರು ಬಂಧಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

> ಪಾಲಕರು ಸಹ ಒಂಭತ್ತನೇ ತರಗತಿಯ ತನಕ ತಮ್ಮ ಮಕ್ಕಳು ಅತ್ಯುತ್ತಮ ಅಂಕವನ್ನು ಹೇಗೆ ಪಡೆದರೂ ಎಂದು ವಾಸ್ತವತೆ ಅರಿಯಲು ಮುಂದಾಗುವುದಿಲ್ಲ. ಅವರಿಗೆ ಬೇಕಾಗಿರುವುದು ಮಕ್ಕಳ ಅಂಕಗಳೇ ಹೊರತು ಯಾವ ಮಾರ್ಗದಿಂದ ಪಡೆದಿದ್ದಾರೆ, ಅಂಕಕ್ಕೆ ತಕ್ಕಂತೆ ಜ್ಞಾನ ಪಡೆದಿದ್ದಾರೆಯೇ ಎಂಬಿತ್ಯಾದಿ ಅಂಶಗಳತ್ತ ಗಮನ ಹರಿಸುವುದಿಲ್ಲ.


# ಉತ್ತಮ ಫಲಿತಾಂಶದ ಗುಟ್ಟು ಇದೀಗ ರಟ್ಟು!

ಒಡಲಾಳ

ಇತ್ತೀಚೆಗಷ್ಟೇ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು (ಓಖಉಅಆ) 2026ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ-1 ಫಲಿತಾಂಶವನ್ನು ಪ್ರಕಟಿಸಿದ್ದು ತಿಳಿದ ಸಂಗತಿ. ಈ ಬಾರಿ ದಾಖಲೆಯ ಶೇ.86.48ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶಿಕ್ಷಣ ಸಚಿವರು ಸೇರಿದಂತೆ ಶಿಕ್ಷಣ ಇಲಾಖೆಗೆ ನಿರೀಕ್ಷೆಯಂತೆ ಫಲಿತಾಂಶ ದಕ್ಕಿಸಿಕೊಂಡಿದ್ದು ಗಮನಿಸಬೇಕಾದ ಅಂಶ. ಇದಲ್ಲದೇ ಬಹುತೇಕ ಮಕ್ಕಳು ನೂರಕ್ಕೆ ನೂರು ಅಂಕಗಳನ್ನು, ಶೇಕಡಾವಾರು ಅತ್ಯುತ್ತಮ ಶ್ರೇಣಿಯ ಅಂಕಗಳನ್ನು ಗಳಿಸಿದ್ದಾರೆ.

ಮಕ್ಕಳ ವರ್ಷವಿಡೀ ಪ್ರಯತ್ನಕ್ಕೆ ಸಂದ ಯಶಸ್ಸನ್ನು ನಾವೆಲ್ಲಾ ಶ್ಲಾಘಿಸಲೇಬೇಕು. ಈ ಸಂಭ್ರಮದ ನಡುವೆಯೇ ಒಬ್ಬ ವಿದ್ಯಾರ್ಥಿಯನ್ನು ನಿಮ್ಮ ಸಾಧನೆಯ ಗುಟ್ಟು ಏನು? ಯಾವ ರೀತಿ ಪರೀಕ್ಷಾ ತಯಾರಿ ಮಾಡಿಕೊಂಡಿದ್ದೀರಿ? ಎಂದು ಕೇಳಿದೆ. ನಮಗೆ ಬೋರ್ಡ್ ಪರೀಕ್ಷಾ ತಯಾರಿಗಾಗಿ ಮೂರು ಮಾದರಿ ಪರೀಕ್ಷೆ ಮಾಡಲಾಗಿತ್ತು. ಜತಗೆ ಪ್ರಶ್ನಾಕೋಶವನ್ನು ಸಿದ್ಧಪಡಿಸಿ ನೀಡಲಾಗಿತ್ತು.

ಪರೀಕ್ಷೆಗೆ ಇವೆರಡರಿಂದಲೇ 70-80ರಷ್ಟು ಪ್ರಶ್ನೆಗಳು ಬರುತ್ತವೆ ಓದಿಕೊಳ್ಳಿ ಎಂದು ಹೇಳಲಾಗಿತ್ತು. ಹಾಗಾಗಿ ಅದಕ್ಕೆ ಹೆಚ್ಚು ಒತ್ತು ನೀಡಿದೆ. ಅವರು ಹೇಳಿದಂತೆ ಪರೀಕ್ಷೆಯಲ್ಲಿ ಇದರಿಂದಲೇ ಅತಿ ಹೆಚ್ಚು ಪ್ರಶ್ನೆಗಳು ಬಂದಿವೆ. ಅನುಕೂಲವಾಯಿತು ಎಂದು ಹೇಳಿದರು. ಇದನ್ನು ಹೇಳುತಲೇ ಒಮ್ಮೆಲೇ ತಬ್ಬಿಬ್ಬಾದೆ.




ಆ ವಿದ್ಯಾರ್ಥಿನಿ ಹೇಳಿದ್ದು ನಿಜವೇ ಎಂದು ತಿಳಿಯಲು ಪಿಯು ಪ್ರಾಧ್ಯಾಪಕರ ಬಳಿ ಒಂದಿಷ್ಟು ವಿಚಾರಿಸಿದೆ. ಆ ವಿದ್ಯಾರ್ಥಿನಿ ಹೇಳಿದ್ದು ಅಕ್ಷರಶಃ ಸತ್ಯವಾಗಿತ್ತು. ಇದರರ್ಥ ಉತ್ತಮ ಫಲಿತಾಂಶಕ್ಕಾಗಿ ಪರೀಕ್ಷೆಗೂ ಮುನ್ನ ಇಲಾಖೆಯೇ ಪರೋಕ್ಷವಾಗಿ ಪ್ರಶ್ನೆಪತ್ರಿಕೆಯನ್ನು ಲೀಕ್ ಮಾಡಿದಂತೆ ಆಯಿತ್ತಲ್ಲ. ಇನ್ನೂ ಉತ್ತಮ ಫಲಿತಾಂಶ ಬಾರದೇ ಏನು? ಎಂದೆನಿಸಿತು.

ನಮ್ಮಲ್ಲಿ ಬಹುತೇಕ ಖಾಸಗಿ ಹಾಗೂ ಸರಕಾರಿ ಶಾಲೆಗಳಲ್ಲಿ ಶಿಕ್ಷಕರು ಪಾಲಕರ ಬಳಿ, ಆಡಳಿತ ಮಂಡಳಿಯವರ ಬಳಿ ಭೇಷ್ ಎಂದೆನಿಸಿಕೊಳ್ಳಲು, ಪರೀಕ್ಷೆಗೂ ಮುನ್ನ ಪೂರ್ವತಯಾರಿಯಾಗಿ ವಿಷಯವಾರು, ಪಾಠವಾರು ಒಂದಿಷ್ಟು ಮುಖ್ಯ ಪ್ರಶ್ನೆಗಳು ಎಂದು ಪಠ್ಯಪುಸ್ತಕದಲ್ಲಿ ಮಾರ್ಕ್ ಮಾಡಿಕೊಡುವ ಪದ್ಧತಿ ಇದೆ. ಅದೇ ಪದ್ಧತಿಯನ್ನು ಶಿಕ್ಷಣ ಇಲಾಖೆ ಈ ಬಾರಿ ಅಳವಡಿಸಿದ್ದು ಪರೀಕ್ಷಾ ಗುಣಮಟ್ಟದ ಬಗ್ಗೆ ಚಿಂತಿಸುವಂತೆ ಮಾಡಿದೆ.


ಈ ಪದ್ಧತಿಯಿಂದ ಮಕ್ಕಳು ಒಂದರಿಂದ ಒಂಭತ್ತನೇ ತರಗತಿಯ ತನಕ ಟಾಪ್ ಕ್ಲಾಸ್‌ನಲ್ಲಿ ಪಾಸ್ ಆಗುತ್ತಾರೆ ನಿಜ. 10ನೇ ತರಗತಿ ಬಂದಾಗಲೇ ಅಸಲಿಯತ್ತು ಬಯಲಾಗುವುದು. ಪಾಪಾ ಆಗ ಮಕ್ಕಳು ತಮ್ಮ ಜತೆ ಇಷ್ಟು ವರ್ಷ ಅನ್ಯಾಯವಾಗಿದೆ ಎಂದು ತಿಳಿದುಕೊಳ್ಳುವಷ್ಟರೊಳಗೆ ಬೋರ್ಡ್ ಪರೀಕ್ಷೆ ಎದುರಿಗಿರುತ್ತದೆ.

ಪಾಲಕರು ಸಹ ಒಂಭತ್ತನೇ ತರಗತಿಯ ತನಕ ತಮ್ಮ ಮಕ್ಕಳು ಅತ್ಯುತ್ತಮ ಅಂಕವನ್ನು ಹೇಗೆ ಪಡೆದರೂ ಎಂದು ವಾಸ್ತವತೆ ಅರಿಯಲು ಮುಂದಾಗುವುದಿಲ್ಲ. ಅವರಿಗೆ ಬೇಕಾಗಿರುವುದು ಮಕ್ಕಳ ಅಂಕಗಳೇ ಹೊರತು ಯಾವ ಮಾರ್ಗದಿಂದ ಪಡೆದಿದ್ದಾರೆ, ಅಂಕಕ್ಕೆ ತಕ್ಕಂತೆ ಜ್ಞಾನ ಪಡೆದಿದ್ದಾರೆಯೇ ಎಂಬಿತ್ಯಾದಿ ಅಂಶಗಳತ್ತ ಗಮನ ಹರಿಸುವುದಿಲ್ಲ.

ಈಗಲೂ ಹಾಗೇ ಆಗುತ್ತಿದೆ. ಪಿಯುಸಿ ಪರೀಕ್ಷೆ -1 ರಲ್ಲಿ ತಮ್ಮ ಮಕ್ಕಳು ನೂರಕ್ಕೆ ನೂರು ಅಂಕ ಪಡೆದರು ಎಂದು ಪಾಲಕರು ತಮ್ಮ ಮಕ್ಕಳ ಸಾಧನೆಯನ್ನು ಸಂಭ್ರಮಿಸುತ್ತಿದ್ದಾರೆ. ಮಕ್ಕಳು ಸಹ ಇದೆಲ್ಲವೂ ತಮ್ಮ ಸ್ವ-ಅಧ್ಯಯನದ ಫಲಶೃತಿ ಎಂದೇ ನಂಬಿಕೊಂಡಿದ್ದಾರೆ. ಹೌದು ಮಕ್ಕಳ ಶ್ರಮ ಇರುವುದು




ನಿಜ. ಆದರೆ ಸಾಧನೆಯ ಹಿಂದಿರುವ ಶ್ರಮಕ್ಕಿಂತಲೂ ಇಲಾಖೆಯ ಪ್ರಶ್ನಾಕೋಶ ಹಾಗೂ ಕಳಪೆ ಮೌಲ್ಯಮಾಪನ ನೀತಿಯ ಪಾತ್ರವೇ ಹಿರಿದು ಎಂಬ ಸತ್ಯ ಯಾರೂ ಗಮನಿಸಿದಂತಿಲ್ಲ. ಹಾಗಂತ ಮಕ್ಕಳು ನೂರಕ್ಕೆ ನೂರು ಅಂಕ ಪಡೆಯುವ ಸಾಮರ್ಥ್ಯ ಹೊಂದಿಲ್ಲ ಎಂದಲ್ಲ.



ಖಂಡಿತವಾಗಿಯೂ ವಿದ್ಯಾರ್ಥಿಗಳಲ್ಲಿ ಸಾಮರ್ಥ್ಯವಿದೆ. ಒಂದೊಮ್ಮೆ 80-90ರ ದಶಕದಲ್ಲಿದ್ದ ಗುಣಮಟ್ಟದ ಶಿಕ್ಷಣ ಹಾಗೂ ಪರೀಕ್ಷಾ ನೀತಿಯನ್ನು ಪಾಲಿಸಿದರೆ ನೂರಕ್ಕೆ ನೂರು ಅಂಕ ಗಳಿಸುವ, ಒಟ್ಟಾರೆ ಶೇ.90ಕ್ಕಿಂತ ಹೆಚ್ಚು ಅಂಕ ಪಡೆಯುವವರ ಸಂಖ್ಯೆ ಕಡಿಮೆಯಾಗಿತ್ತು. ಏಕೆಂದರೆ ಆಗ ಅಂಕ ಸಾಧನೆಯ ಮೌಲ್ಯಾಂಕನವಾಗಿರಲಿಲ್ಲ.

ಇನ್ನೂ ಮಕ್ಕಳಿಗೆ ಒಂದು ವಿಷಯದ ಸಂಪೂರ್ಣ ಭಾಗ ಪಠ್ಯಕ್ರಮದಲ್ಲಿ ಇರುವುದಿಲ್ಲ. ಬದಲಾಗಿ ಒಂದು ವಿಷಯದಲ್ಲಿನ ಕೆಲವು ನಿರ್ದಿಷ್ಟ ಭಾಗವನ್ನು(ಆಯ್ದ) ಮಾತ್ರ ಕಲಿಕೆಯ ವಿಷಯವಾಗಿರುತ್ತದೆ. ನಂತರ ಕಲಿತ ಒಂದಂಶದಲ್ಲಿ ಕೆಲವೇ ಭಾಗ ಮಾತ್ರ ಪರೀಕ್ಷೆಯಲ್ಲಿ ಕೇಳಲಾಗುತ್ತದೆ. ಹಾಗಾಗಿ ಎಲ್ಲಿಯೂ ಸಹ ಸಮಗ್ರ ಜ್ಞಾನದ ಕುರಿತ ಮೌಲ್ಯಮಾಪನ ನಡೆಯು ವುದಿಲ್ಲ. ಇದರ ಜತೆಗೆ ಫಲಿತಾಂಶ ಹೆಚ್ಚಳಕ್ಕಾಗಿ ಇಲಾಖೆಯೇ ನೀಡುವ ಪ್ರಶ್ನೆಕೋಶ, ಮಾದರಿ ಪರೀಕ್ಷೆ ವ್ಯವಸ್ಥೆ ನೋಡುವಾಗ ಬೋರ್ಡ್ ಪರೀಕ್ಷೆ ಎದುರಿಸಲು ವರ್ಷಪೂರ್ತಿ ಓದಬೇಕಿಲ್ಲ ಎಂದೆನಿಸುತ್ತಿದೆ.

ಇಂದು ಕೇವಲ ಪಿಯುಸಿ ಫಲಿತಾಂಶ ಹೆಚ್ಚಳಕ್ಕಾಗಿ ಶಿಕ್ಷಣ ಇಲಾಖೆ ಈ ಮಾರ್ಗ ಅನುಸರಿಸಿಲ್ಲ. ಬದಲಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲೂ ಇದು ಮುಂದುವರಿದಿರುವುದು ಕಾಣಬಹುದು. ಈ ಬಾರಿ ಅತ್ಯುತ್ತಮ ಫಲಿತಾಂಶದ ಸಾಧನೆಗಾಗಿ ಈಗಾಗಲೇ 33 ಪಾಸ್ ಅಂಕ ಘೋಷಣೆ ಆಗಿದ್ದರೂ ಕೂಡ ಮೌಲ್ಯಮಾಪನ ವ್ಯವಸ್ಥೆಯಲ್ಲಿ ಸಾಕಷ್ಟು ಲೋಪಗಳು ಕಾಣಸಿಗುತ್ತವೆ.




ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮೌಲ್ಯಮಾಪನ ಪ್ರಕ್ರಿಯೆಗೆ ನಿಯೋಜನೆಗೊಳ್ಳಲು ವಿಷಯ ಶಿಕ್ಷಕರು ಕನಿಷ್ಠ ಮೂರು ವರ್ಷ ಹತ್ತನೇ ತರಗತಿಗೆ ಬೋಧನೆ ಮಾಡಿದ ಅನುಭವ ಹೊಂದಿರಬೇಕೆಂಬ ನಿಯಮವಿದೆ. ಆದರೆ ಇತ್ತೀಚಿನ ಮೌಲ್ಯಮಾಪನದಲ್ಲಿ ಈ ನಿಯಮ ಕಟ್ಟುನಿಟ್ಟಾಗಿ ಪಾಲನೆಯಾಗುತ್ತಿಲ್ಲ ಎಂಬುದೇ ಆತಂಕದ ಸಂಗತಿ. ಈ ಬಾರಿ ಹಲವು ಶಾಲೆಗಳು ತಮ್ಮ ಶಾಲೆಯ ಶಿಕ್ಷಕರಲ್ಲದ, 6-8ನೇ ತರಗತಿ ಪಾಠ ಮಾಡುವ, ಅನುಭವವಿಲ್ಲದ ಶಿಕ್ಷಕರ ಹೆಸರನ್ನು ತಮ್ಮ ಶಾಲೆಯ ಸ್ಯಾಟ್ಸ್ ತಂತ್ರಾಂಶದಲ್ಲಿ ದಾಖಲಿಸಿ, ಅವರ ಹೆಸರನ್ನೇ ಮೌಲ್ಯಮಾಪಕರನ್ನು ಸೂಚಿಸಿರುತ್ತಾರೆ.

ಸಂಬಂಧಿಸಿದ ಬಿಇಓಗಳು ಇದ್ಯಾವುದನ್ನು ಪರಿಶೀಲಿಸದೆ ಅಂತಹವರನ್ನು ಮೌಲ್ಯಮಾಪನಕ್ಕೆ ನಿಯುಕ್ತಿಗೊಳಿಸುತ್ತಿದ್ದಾರೆ. ಅನುಭವ ಇಲ್ಲದಿದ್ದರೂ ಮೌಲ್ಯಮಾಪನ ಹೇಗೆ ಮಾಡಿದ್ದೀರಿ ಎಂದು ಕೇಳಿದರೆ ಕೀ ಉತ್ತರ ನೋಡಿ ಎನ್ನುತ್ತಾರೆ. ಕೀ ಉತ್ತರ ನೋಡಿ ಮೌಲ್ಯಮಾಪನ ಮಾಡುವುದು ತಪ್ಪಲ್ಲ, ಹಾಗಂತ ಕೀ ಉತ್ತರ ನೋಡಿ ಮೌಲ್ಯಮಾಪನ ಮಾಡಲು ಶಿಕ್ಷಕರೇ ಆಗಬೇಕಿಂದಿಲ್ಲ, ಆ ಕೆಲಸವನ್ನು ಬ್ಯಾಂಕ್ ನೌಕರನೋ, ಪೊಲೀಸ್ ಅಧಿಕಾರಿಗಳೋ ಮಾಡಬಹುದಲ್ಲವೇ? ಈ ಹಿಂದೆ ದರ ಪರಿಷ್ಕರಣೆ ವಿಷಯದಲ್ಲಿ ಮೌಲ್ಯಮಾಪಕರು ಬಹಿಷ್ಕರಿಸುವ ಹೋರಾಟ ಮಾಡಿದಾಗಲೂ ಕೀ ಉತ್ತರ ನೀಡಿ ಬೇರೆಯವರಿಂದ ಮಾಡಿಸುತ್ತೇವೆ ಎಂಬ ಉಢಾಪೆಯ ಮಾತುಗಳು ಕೇಳಿ ಬಂದಿದ್ದವು.

ಅದುವೇ ಮೌಲ್ಯಮಾಪಕರಾಗಿ ಆಯ್ಕೆ ಆಗುವವರು ವಿಷಯದ ಮೇಲೆ ಹಿಡಿತ ಹೊಂದಿದವರಾಗಿದ್ದರೆ, ಮಕ್ಕಳಿಗೆ ಸೂಕ್ತ ನ್ಯಾಯ ಒದಗಿಸಲು ಸಾಧ್ಯವಾಗುತ್ತದೆ. ಖಾಸಗಿ ಶಾಲೆಯಲ್ಲಿ ವರ್ಷ ವರ್ಷವೂ ಶಿಕ್ಷಕರು ಬದಲಾಗುತ್ತಲೇ ಇರುತ್ತಾರೆ. ಒಂದೆಡೆ ಗುಣಮಟ್ಟದ ಶಿಕ್ಷಕರ ಅಭಾವ ಇರುವಾಗ, ಮೊದಲ ಬಾರಿಗೆ ಹತ್ತನೇ ತರಗತಿಗೆ ಪಾಠ ಮಾಡುವ ಶಿಕ್ಷಕರು ಹೇಗೆ ಯೋಗ್ಯ ಮೌಲ್ಯಮಾಪನ ಮಾಡಲು ಸಾಧ್ಯ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮೊದಲ ಬಾರಿಗೆ ಹತ್ತನೇ ತರಗತಿ ಪಾಠ ಮಾಡುವುದು ಬೇರೆ, ಮೊದಲ ಬಾರಿಗೆ ಮೌಲ್ಯಮಾಪನ ಮಾಡಲು ಆಯ್ಕೆ ಆಗುವುದು ಬೇರೆ. ಇವೆರಡರ ನಡುವೆ ಮೂರು ವರ್ಷಗಳ ಅನುಭವದ ವ್ಯತ್ಯಾಸವಿದೆ.

ಪ್ರಸ್ತುತ ದಿನಕ್ಕೆ 20 ಉತ್ತರ ಪತ್ರಿಕೆ ಅಷ್ಟೇ ಮೌಲ್ಯಮಾಪನ ಮಾಡಲು ನೀಡುತ್ತಿದ್ದಾರೆ. ಕನ್ನಡ ಭಾಷಾ ಉತ್ತರ ಪತ್ರಿಕೆ ಮೌಲ್ಯಮಾಪನ ವೆಚ್ಚ ರು.27 ಹಾಗೂ ಇತರ ವಿಷಯಕ್ಕೆ ರು.25 ಪ್ರತಿ ಉತ್ತರ ಪತ್ರಿಕೆಗೆ ನೀಡುತ್ತಾರೆ. ಒಬ್ಬ ಮೌಲ್ಯಮಾಪಕರಿಗೆ 100 ಉತ್ತರ ಪತ್ರಿಕೆ ನೀಡುತ್ತಾರೆ. ಒಂದೊಮ್ಮೆ ಫಲಿತಾಂಶದ ಬಳಿಕ ವಿದ್ಯಾರ್ಥಿ ಮರು ಮೌಲ್ಯಮಾಪನದಲ್ಲಿ 6ಕ್ಕಿಂತ ಹೆಚ್ಚು ಅಂಕ ಪಡೆದರೆ ಆ ಉತ್ತರ ಪತ್ರಿಕೆ ಮೌಲ್ಯಮಾಪಕರಿಗೆ ಒಂದು ಸಾವಿರ ದಂಡ ವಿಧಿಸಲಾಗುತ್ತದೆ.

ಪ್ರತಿ ಬಾರಿಯೂ ದಂಡ ತುಂಬಿದ ಹಲವು ನಿದರ್ಶನಗಳಿವೆ. ಹಾಗಾಗಿ ದಂಡದಿಂದ ತಮ್ಮನ್ನು ತಾವು ಕಾಪಾಡಿಕೊಳ್ಳಲು 6 ರಿಂದ 8 ಅಂಕಗಳನ್ನು ಒಟ್ಟಾರೆಯಾಗಿ ಹೆಚ್ಚಿಗೆ ನೀಡುವ ಶಿಕ್ಷಕರು ಇದ್ದಾರೆ. ಇನ್ನೂ ಮೌಲ್ಯಮಾಪನ ಕೇಂದ್ರದಲ್ಲಿ ಮೊಬೈಲ್ ಬಳಕೆ ನಿಷೇಧವಿದ್ದರೂ ಮೇಲ್ವಿಚಾರಕರ ಕಣ್ಣು ತಪ್ಪಿಸಿ ಮೊಬೈಲ್ ಬಳಕೆಯೂ ನಡೆಯುತ್ತದೆ. ಈ ರೀತಿಯ ಕಳಪೆ ಮೌಲ್ಯಮಾಪನದಿಂದ ಪಡೆದ ಅಂಕಗಳು ಉತ್ತಮ ಸಾಧನೆ ಹೇಗಾಗುತ್ತದೆ? ಒಂದೊಮ್ಮೆ ನಿಜವಾಗಿಯೂ ರಾಜ್ಯ ಶಿಕ್ಷಣ ಇಲಾಖೆಯು ಗುಣಮಟ್ಟ ಪ್ರಶ್ನಾಪತ್ರಿಕೆ, ಮೌಲ್ಯಾಮಾಪನ ವ್ಯವಸ್ಥೆಯ ಮೂಲಕ ಫಲಿತಾಂಶ ಪಡೆದಿದ್ದರೆ ಅಥವಾ ದಾಖಲಿಸಿದ್ದರೆ, ಪಿಯುಸಿ 99 ಪ್ರತಿಶತ ಪಡೆದ ವಿದ್ಯಾರ್ಥಿಗಳು ನೀಟ್, ಜೆಇಇ, ಐಐಟಿ ಅಂತಹ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಏಕೆ ಅತಿ ಹೆಚ್ಚು ಸಂಖ್ಯೆಯಲ್ಲಿ ಸೀಟು ಪಡೆಯುತ್ತಿಲ್ಲ.

ಈ ವಿಷಯದಲ್ಲಿ ಸಿಬಿಎಸ್‌ಇ ಹಾಗೂ ಇತರ ಶಿಕ್ಷಣ ಇಲಾಖೆಯ ಮಕ್ಕಳೇ ಏಕೆ ಮೇಲುಗೈ? ನಮ್ಮಲ್ಲಿ ಕಟ್ಟಡಗಳ ನಿರ್ಮಾಣವೇ ಅಭಿವೃದ್ಧಿಯ ಸಂಕೇತವೆಂಬಂತೆ ಬಿಂಬಿಸಲಾಗುತ್ತದೆ. ಅದೇ ರೀತಿ ಶಿಕ್ಷಣ ಇಲಾಖೆ ಹಾಗೂ ಸಚಿವರು ತಮ್ಮ ಸರಕಾರದ ಅವಧಿಯಲ್ಲಿ ದಾಖಲೆಯ ಫಲಿತಾಂಶದ ಏರಿಕೆ ಹಾಗೂ ಅತಿ ಹೆಚ್ಚು ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಗಳಿಸುವಂತೆ ಮಾಡಿರುವುದೇ ಶಿಕ್ಷಣದ ಅಭಿವೃದ್ಧಿ ಎಂದುಕೊಂಡಿರುವ ಮನೋಭಾವನೆ ಬದಲಾಗಬೇಕಿದೆ. ಕೇವಲ ಅಂಕ ಏರಿಕೆಯಿಂದ ಪ್ರಯೋಜನವಿಲ್ಲ, ಬದಲಾಗಿ ಅಂಕಗಳ ಹಿಂದೆ ಜ್ಞಾನಾಧಾರಿತ ಕಲಿಕೆಯಾಗಬೇಕಾದ ಅಗತ್ಯವಿದೆ.

**- ಸುರೇಂದ್ರ ಪೈ,** ಭಟ್ಕಳ

# ಗಿಡವೊಂದು ಸುಪುಷ್ಟವಾಗಿ ಬೆಳೆಯಲು ಬೇರು ಗಟ್ಟಿಯಾಗಬೇಕು

> **ಮಾವೋನ ಈ ಮಾತಿಗೆ ನಸುನಕ್ಕ ತಾಯಿ, ಅಯ್ಯೋ ದಡ್ಡಾ, ಗಿಡಗಳ ಜೀವ ಇರುವುದು ಅವುಗಳ ಹೂವು ಅಥವಾ ಎಲೆಗಳಲ್ಲಿ ಅಲ್ಲ; ಬದಲಿಗೆ ಬುಡದಲ್ಲಿರುವ ಬೇರುಗಳಲ್ಲಿ. ನೀನು ಹೂವನ್ನು ಎಷ್ಟೇ ಪ್ರೀತಿಯಿಂದ ಮುದ್ದಿಸಿ, ಎಲೆಗಳ ಮೇಲಿನ ಧೂಳನ್ನು ತೆಗೆದರೂ, ಗಿಡಗಳ ಬೇರಿನ ಆರೈಕೆ ಮಾಡದಿದ್ದರೆ ಏನೂ ಪ್ರಯೋಜನವಿಲ್ಲ.**

ಒಂದೊಳ್ಳೆ ಮಾತು

ಚೀನಿ ನಾಯಕ ಮಾವೋತ್ಸೇ ತುಂಗ್ ಅವರಿನ್ನೂ ಚಿಕ್ಕ ಹುಡುಗನಾಗಿದ್ದಾಗ, ಅವರ ತಾಯಿ ಮನೆಯ ಮುಂದೆ ಸುಂದರವಾದ ಹೂದೋಟವೊಂದನ್ನು ರೂಪಿಸಿದ್ದರು. ಅದರಲ್ಲಿ ಅತ್ಯಂತ ಸುಂದರವಾದ, ವಿವಿಧ ಪ್ರಭೇದದ ಬಣ್ಣದ ಹೂವುಗಳು ಅರಳುತ್ತಿದ್ದವು. ಅದರಲ್ಲೂ ನಿರ್ದಿಷ್ಟವಾಗಿ ಗುಲಾಬಿ ಹೂವುಗಳು ತುಂಬಾ ಆಕರ್ಷಣೀಯವಾಗಿ ಕಾಣುತ್ತಿದ್ದವು. ಅವನ್ನು ನೋಡಲು ದೂರ ದೂರದಿಂದ ಜನರು ಬಂದುಹೋಗುತ್ತಿದ್ದರು.

ಮಾವೋ ಅವರ ತಾಯಿಗೆ ತಮ್ಮ ವಯಸ್ಸಿನ ಬಗ್ಗೆಯಾಗಲೀ, ತಮಗಿರುವ ಕಾಯಿಲೆಯ ಬಗ್ಗೆಯಾಗಲೀ ಚಿಂತೆಯಿರಲಿಲ್ಲ; ಆ ಚಿಂತೆಯೆಲ್ಲಾ ಇದ್ದುದು ತಾವು ನೆಟ್ಟ ಹೂವಿನ ಗಿಡಗಳ ಬಗ್ಗೆಯೇ!

ಇದನ್ನು ಗಮನಿಸಿಕೊಂಡೇ ಬಂದಿದ್ದ ಮಾವೋ, ತಾಯಿಯನ್ನು ಸಮಾಧಾನಪಡಿಸುತ್ತಾ, ಅಮ್ಮಾ, ನೀನು ಹೂವಿನ ಗಿಡಗಳ ಬಗ್ಗೆ ಚಿಂತಿಸಬೇಡ, ಅವನ್ನು ನಾನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಆಶ್ವಾಸನೆ ನೀಡಿದ. ಹಾಗೆಯೇ ತೋಟವನ್ನು ನೋಡಿಕೊಳ್ಳತೊಡಗಿದ. ಪ್ರತಿದಿನ ಬೆಳಗಿನಿಂದ ಸಂಜೆಯವರೆಗೆ ತೋಟದಲ್ಲೇ ಓಡಾಡುತ್ತಿದ್ದ. ದಿನಗಳು ಹೀಗೆಯೇ ಸಾಗುತ್ತಿದ್ದವು.

ಸ್ವಲ್ಪ ದಿನಗಳ ನಂತರ ಅವನ ತಾಯಿ ಚೇತರಿಸಿಕೊಂಡು, ತಾನು ಬೆಳೆಸಿದ ತೋಟವನ್ನು ನೋಡಲೆಂದು ಬಂದಳು. ಅಲ್ಲಿನ ದೃಶ್ಯವನ್ನು ನೋಡುತ್ತಿದ್ದಂತೆ ಅವಳಿಗೆ ತುಂಬಾ ದುಃಖವಾಯಿತು. ಕಾರಣ, ಅಲ್ಲಿದ್ದ ಗಿಡಗಳೆಲ್ಲವೂ ಹಾಳಾಗಿ ಹೋಗಿದ್ದವು; ಅವುಗಳ ಎಲೆ-ಹೂವುಗಳೆಲ್ಲಾ ಒಣಗಿ ಬಿಟ್ಟಿದ್ದವು. ಇದನ್ನು ಕಂಡು ಅವಳು ಬಹಳ ಬೇಸರದಿಂದಲೇ, ನೀನು ಇಡೀ ದಿನ ತೋಟದಲ್ಲಿಯೇ ಇರುತ್ತಿದ್ದೆ. ಇದೇ ಏನು ನೀನು ಗಿಡಗಳನ್ನು ನೋಡಿಕೊಂಡಿದ್ದು? ಒಣಗಿ ಹಾಳಾಗಿ ಹೋಗಿರುವ ಅವೆಲ್ಲವೂ ಇನ್ನೇನು ಸಾಯುವ ಸ್ಥಿತಿಯಲ್ಲಿವೆ.

ಈ ಗಿಡಗಳನ್ನೆಲ್ಲಾ ನಾನು ಎಷ್ಟು ಕಷ್ಟಪಟ್ಟು ಬೆಳೆಸಿದ್ದೆ ಎಂಬುದು ನಿನಗೆ ಗೊತ್ತೇ? ಎಂದು ಮಗನನ್ನು ಕೇಳಿ ತರಾಟೆಗೆ ತೆಗೆದುಕೊಂಡಳು. ಆಗ ಅಳತೊಡಗಿದ ಮಗ ಮಾವೋ, ಅಮ್ಮಾ ನಾನು ತುಂಬಾ ಶ್ರಮಪಟ್ಟು ಎಲ್ಲ ಗಿಡಗಳನ್ನೂ ಪ್ರೀತಿಯಿಂದಲೇ ನೋಡಿಕೊಳ್ಳುತ್ತಿದ್ದೆ. ಆದರೂ ಈ ಗಿಡಗಳ ಸ್ಥಿತಿ ಈ ರೀತಿ ಆಗಿದೆ.


ನಾನು ಗಿಡದ ಹೂವುಗಳಿಗೆಲ್ಲಾ ಪ್ರತಿದಿನವೂ ಪ್ರೀತಿಯಿಂದ ಮುತ್ತಿಟ್ಟೇ ಮಾತನಾಡಿಸುತ್ತಿದ್ದೆ. ಪ್ರತಿ ಎಲೆಯ ಮೇಲಿನ ಧೂಳನ್ನು ಒರೆಸಿ ಸ್ವಚ್ಛವಾಗಿಸುತ್ತಿದ್ದೆ. ಆದರೂ ಹೀಗಾಗಿದ್ದೇಕೆ ಅಂತ ನನಗೂ ಗೊತ್ತಾಗುತ್ತಿಲ್ಲ. ಇದರಿಂದ ನನಗೂ ಬಹಳ ಬೇಸರವಾಗುತ್ತಿದೆ ಅಮ್ಮಾ ಎಂದ ಗದ್ಗದಿತನಾಗಿ.

ಮಾವೋನ ಈ ಮಾತಿಗೆ ನಸುನಕ್ಕ ತಾಯಿ, ಅಯ್ಯೋ ದಡ್ಡಾ, ಗಿಡಗಳ ಜೀವ ಇರುವುದು ಅವುಗಳ ಹೂವು ಅಥವಾ ಎಲೆಗಳಲ್ಲಿ ಅಲ್ಲ; ಬದಲಿಗೆ ಬುಡದಲ್ಲಿರುವ ಬೇರುಗಳಲ್ಲಿ. ನೀನು ಹೂವನ್ನು ಎಷ್ಟೇ ಪ್ರೀತಿಯಿಂದ ಮುದ್ದಿಸಿ, ಎಲೆಗಳ ಮೇಲಿನ ಧೂಳನ್ನು ತೆಗೆದರೂ, ಗಿಡಗಳ ಬೇರಿನ ಆರೈಕೆ ಮಾಡದಿದ್ದರೆ ಏನೂ ಪ್ರಯೋಜನವಿಲ್ಲ.

ಬೇರುಗಳಿಗೆ ಆಹಾರ ಮತ್ತು ನೀರನ್ನು ಕೊಟ್ಟಾಗ ಮಾತ್ರವೇ ಅವು ಬದುಕುಳಿಯುವುದು, ಹೂವು ಮತ್ತು ಎಲೆಗಳು ನಳನಳಿಸುವುದು ಎಂದು ಹೇಳಿದಳು. ಇಷ್ಟು ಸರಳವಾದ ವಿಚಾರ ತನಗೆ ಹೊಳೆದೇ ಇಲ್ಲವಲ್ಲಾ? ಎಂದುಕೊಳ್ಳುತ್ತಾ ಮಾವೋ ನಾಚಿಕೊಂಡ.

ಗಿಡಗಳ ಜೀವವಿರುವುದು ಯಾರಿಗೂ ಕಾಣಿಸದೆ ನೆಲದೊಳಗೆ ಅವಿತಿರುವ ಅವುಗಳ ಬೇರುಗಳಲ್ಲಿ. ಯಾರು ಬೇರುಗಳನ್ನು ಪೋಷಿಸುವರೋ ಅವರು ಹೂವು ಮತ್ತು ಎಲೆಗಳ ಬಗ್ಗೆ ಅಷ್ಟೇನೂ ಕಾಳಜಿ ವಹಿಸಬೇಕಾಗುವುದಿಲ್ಲ. ಈ ಗ್ರಹಿಕೆಯನ್ನು ನಮ್ಮ ಬದುಕಿಗೂ ಅನ್ವಯಿಸಿಕೊಳ್ಳಬೇಕು.

ನಮ್ಮ ಮಕ್ಕಳನ್ನು ನೋಡಿಕೊಳ್ಳುವಾಗಲೂ ಅವರಿಗೆ ಮೊದಲು ಜೀವನಕಲೆಯನ್ನು ಕಲಿಸಿ, ಅವರನ್ನು ಬೇರಿನಿಂದ ಗಟ್ಟಿಯಾಗಿಸಬೇಕು. ಅವರಿಗೆ ಒಳ್ಳೆಯ ಸಂಸ್ಕಾರವನ್ನು ಕೊಟ್ಟು ಚೆನ್ನಾಗಿ ಬದುಕುವ ದಾರಿಯನ್ನು ತೋರಿಸಿಕೊಡಬೇಕು.



ನಾವು ಮಾಡುವ ಮುದ್ದು, ನೀಡುವ ಉಡುಗೊರೆಗಳು ಅವರಲ್ಲಿ ಒಂದು ಹಂತಕ್ಕೆ ಪ್ರೀತಿಯ ಸೆಲೆಯನ್ನು ಚಿಮ್ಮಿಸಿದರೂ, ಅವು ಅವರನ್ನು ಬದುಕಿನಲ್ಲಿ ಬೆಳೆಸುವುದಿಲ್ಲ, ಮಕ್ಕಳಿಗೆ ನಾವು ಕಲಿಸುವ ಶಿಸ್ತು ಮತ್ತು ಮನೆಗೆಲಸ, ನೀಡುವ ಒಳ್ಳೆಯ ವಿದ್ಯಾಭ್ಯಾಸ ಮತ್ತು ಸಂಸ್ಕಾರ, ಉಣಿಸುವ ಪೌಷ್ಟಿಕ ಆಹಾರ ಮುಂತಾದವು ಅವರನ್ನು ನಾಳಿನ ಉತ್ತಮ ಮತ್ತು ಜವಾಬ್ದಾರಿಯುತ ಪ್ರಜೆಗಳನ್ನಾಗಿಸುತ್ತವೆ ಎಂಬುದನ್ನು ಮರೆಯದಿರೋಣ...

**- ರೂಪಾ** ಗುರುರಾಜ್

> **ನಮ್ಮ ಅಚ್ಚುಮೆಚ್ಚಿನ ಗುರುಗಳು, ಶೈಕ್ಷಣಿಕ ಕ್ರಾಂತಿಯ ರೂವಾರಿಗಳು, ಅಕ್ಷರದ ಸಂತ, ಕರುಣೆಯ ಸಾಗರ, ಸಾಮಾಜಿಕ, ಧಾರ್ಮಿಕ ಸುಧಾರಣೆಯ ಹರಿಕಾರರು, ಬಸವತತ್ವದ ನಿಜ ವಾರಸುದಾರರು ಎಂಬೆಲ್ಲ ಬಿರುದಾಂಕಿತಗಳಿಗೆ ಅನ್ವರ್ಥವಾಗಿ ತಮ್ಮ ಸಾರ್ಥಕ 75 ವರ್ಷಗಳ ಬದುಕನ್ನು ಸಮಾಜಕ್ಕಾಗಿ ಮೀಸಲಿಟ್ಟಿರುವ ಪರಮಪೂಜ್ಯ ಡಾ.ಬಸವಲಿಂಗ ಪಟ್ಟದ್ದೇವರು ಸಹ ಹಿರಿಯರ ವಾಣಿಯಂತೆ ದಲಿತರ, ಪರಿತ್ಯಕ್ತ ಮಕ್ಕಳ ಸೇವೆಯಲ್ಲಿಯೇ ದೇವರನ್ನು ಕಂಡ ಮಹಾನ್ ಚೇತನರಾಗಿದ್ದಾರೆ.**

# ಪರಿತ್ಯಕ್ತ ಮಕ್ಕಳ ಸೇವೆಯಲ್ಲಿಯೇ ಭಗವಂತನ ಕಂಡ ಪಟ್ಟದ್ದೇವರು

**(ನಿಕಟಪೂರ್ವ ಅಧ್ಯಕ್ಷರು, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು)**

**ಹೆತ್ತವರಿಗೆ ಬೇಡವಾದ ಕಂದಮ್ಮಗಳು ಹಿರೇಮಠದ ಪಾಲಿಗೆ ಸುದೈವಿಗಳು**

**20 ಸಾವಿರ ಮಕ್ಕಳಿಗೆ ಅಕ್ಷರ ದಾಸೋಹ**

ಮಕ್ಕಳು ಭಗವಂತನ ಸ್ವರೂಪ. ಅವರ ನಿಷ್ಕಲ್ಮಶ ಹೃದಯದಲ್ಲಿ ಭಗವಂತ ಅಡಗಿರುತ್ತಾನೆ. ಅವರ ಅಭಿವೃದ್ಧಿಗೆ ಶ್ರಮಿಸುವುದು ಎಂದರೆ ಭಗವಂತನ ನೈಜ ಸೇವೆ ಮಾಡಿದಂತೆ ಎಂದು ಹಿರಿಯರು, ಜ್ಞಾನಿಗಳು, ಅನುಭಾವಿಗಳು ಹೇಳುತ್ತಾರೆ.

ನಮ್ಮ ಅಚ್ಚುಮೆಚ್ಚಿನ ಗುರುಗಳು, ಶೈಕ್ಷಣಿಕ ಕ್ರಾಂತಿಯ ರೂವಾರಿಗಳು, ಅಕ್ಷರದ ಸಂತ, ಕರುಣೆಯ ಸಾಗರ, ಸಾಮಾಜಿಕ, ಧಾರ್ಮಿಕ ಸುಧಾರಣೆಯ ಹರಿಕಾರರು, ಬಸವತತ್ವದ ನಿಜ ವಾರಸುದಾರರು ಎಂಬೆಲ್ಲ ಬಿರುದಾಂಕಿತಗಳಿಗೆ ಅನ್ವರ್ಥವಾಗಿ ತಮ್ಮ ಸಾರ್ಥಕ 75 ವರ್ಷಗಳ ಬದುಕನ್ನು ಸಮಾಜಕ್ಕಾಗಿ ಮೀಸಲಿಟ್ಟಿರುವ ಪರಮಪೂಜ್ಯ ಡಾ.ಬಸವಲಿಂಗ ಪಟ್ಟದ್ದೇವರು ಸಹ ಹಿರಿಯರ ವಾಣಿಯಂತೆ ದಲಿತರ, ಪರಿತ್ಯಕ್ತ ಮಕ್ಕಳ ಸೇವೆಯಲ್ಲಿಯೇ ದೇವರನ್ನು ಕಂಡ ಮಹಾನ್ ಚೇತನರಾಗಿದ್ದಾರೆ.

ಪರಮ ಪೂಜ್ಯರಿಗೆ ಮಕ್ಕಳೆಂದರೆ ಎಲ್ಲಿಲ್ಲದ ಪ್ರೀತಿ. ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು, ದೇಶದ ನಿಜವಾದ ಸಂಪತ್ತು ರಾಷ್ಟ್ರದ ಆರ್ಥಿಕತೆ ಅಲ್ಲ; ಬದಲಾಗಿ ಆ ರಾಷ್ಟ್ರದಲ್ಲಿರುವ ಮಾನವ ಸಂಪನ್ಮೂಲಗಳಾದ ಮಕ್ಕಳ ಸಂಖ್ಯೆಯ ಮೇಲೆ ನಿಂತಿದೆ. ನಿಜಾರ್ಥದಲ್ಲಿ ಮಕ್ಕಳೇ ದೇಶದ ಆಸ್ತಿ. ಪರಿತ್ಯಕ್ತ ಮಕ್ಕಳ ಪೋಷಣೆ: ಒಂದು ದೇಶದ ಸಂಪತ್ತೇ ಆಗಿರುವ ಮಕ್ಕಳಿಗೆ ಬಾಲ್ಯದಿಂದಲೇ ಗುಣಾತ್ಮಕ ಶಿಕ್ಷಣ, ಉತ್ತಮ ಸಂಸ್ಕಾರ, ಮೌಲ್ಯಯುತ ವಾತಾವರಣಗಳನ್ನು ಕಲ್ಪಿಸಿ ಅವರ ವಿಕಾಸಕ್ಕೆ, ಪ್ರಗತಿಗೆ ಶ್ರಮಿಸಿದಲ್ಲಿ ಮಾತ್ರ ಸಮಾಜ, ರಾಜ್ಯ, ರಾಷ್ಟ್ರದ ತ್ವರಿತ ಪ್ರಗತಿ ಸಾಧ್ಯ.

ಇದನ್ನು ಚೆನ್ನಾಗಿ ಅರಿತಿರುವ ಡಾ.ಬಸವಲಿಂಗ ಪಟ್ಟದ್ದೇವರು, ಹೆತ್ತವರು ನಾನಾ ಕಾರಣಗಳಿಗಾಗಿ ತಮಗೆ ಬೇಡವೆಂದು ತಿಪ್ಪೆ ಗುಂಡಿಯಲ್ಲಿ, ಗಿಡಗಂಟಿಗಳ ಕೆಳಗೆ, ರಸ್ತೆಗಳ ಅಕ್ಕಪಕ್ಕ, ರೈಲ್ವೆ, ಬಸ್ ನಿಲ್ದಾಣಗಳಲ್ಲಿ ಬಿಸಾಡಿ ಹೋದ ಪರಿತ್ಯಕ್ತ ಮಕ್ಕಳನ್ನು ಪಾಲನೆ, ಪೋಷಣೆ ಮಾಡಿ ಬೆಳೆಸಲು ನ್ಯಾಯಾಲಯದ ಕಟಕಟೆ ಏರಿ, ಮಕ್ಕಳನ್ನು ತಮ್ಮ ಸುಪರ್ದಿಗೆ ಪಡೆದು ಕರಡ್ಯಾಳದ ದತ್ತು ಕೇಂದ್ರದಲ್ಲಿ ಈ ಮಕ್ಕಳಿಗೆ ಅನ್ನ, ಆಶ್ರಯ, ಗುಣಾತ್ಮಕ ಶಿಕ್ಷಣ ನೀಡಿ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತಂದು ಅವರ ಬಾಳನ್ನು ಬೆಳಗಿದ್ದಾರೆ. ಈ ಮೂಲಕ ಸಮಾಜಕ್ಕೆ ಮಕ್ಕಳ ರೂಪದಲ್ಲಿ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಅನ್ನ, ಆಶ್ರಯ, ಶಿಕ್ಷಣ: ಪರಿತ್ಯಕ್ತ, ನಿರ್ಗತಿಕ ಮಕ್ಕಳ ಪಾಲನೆ, ಪೋಷಣೆ ಮತ್ತು ಈ ಮಕ್ಕಳ ಬದುಕು ರೂಪಿಸಲು ಅವರು ಪಟ್ಟಿರುವಂಥ ಪರಿಶ್ರಮವು ಜಗತ್ತೇ ಮೆಚ್ಚುವಂಥದ್ದು.

ಹೆತ್ತವರು, ಸಮಾಜವು ತನಗೆ ಬೇಡವೆಂದು ಹೇಳಿ, ಕರುಳ ಬಳ್ಳಿ ಸಂಬಂಧವನ್ನು ಕಡಿದು ವಿವಿಧ ಸ್ಥಳಗಳಲ್ಲಿ ಎಸೆದ ಎಳೆ ಕಂದಮ್ಮಗಳನ್ನು ಜಿಲ್ಲಾ ಮಕ್ಕಳ ಸಂರಕ್ಷಣಾ ಅಧಿಕಾರಿ ಅವರು ಹಿರೇಮಠ ಸಂಸ್ಥಾನದ ಸ್ವದೇಶಿ ದತ್ತು ಕೇಂದ್ರಕ್ಕೆ ನಿಯಮಾನುಸಾರ ಒಪ್ಪಿಸಿದರು. ಈ ಮಕ್ಕಳಿಗೆ ತಮ್ಮಲ್ಲಿ ಇರುವಷ್ಟು ದಿನ ಅನ್ನ, ಆಶ್ರಯ, ಗುಣಾತ್ಮಕ ಶಿಕ್ಷಣ ನೀಡುವುದರ ಮೂಲಕ ಸುಂದರ, ಭವ್ಯ ಬದುಕು ರೂಪಿಸುತ್ತಿದ್ದಾರೆ ಪರಮಪೂಜ್ಯರು. ಸುದೈವಿ ಮಕ್ಕಳ ಜನ್ಮದಿನ: ಪರಿತ್ಯಕ್ತ ಮಕ್ಕಳ ಬದುಕು ರೂಪಿಸುವುದೇ ನಿಜವಾದ ಮಾನವೀಯ ಕಾರ್ಯ.

ಇದೇ ಶರಣ ಧರ್ಮ ಎಂದರಿತ ಬಸವಲಿಂಗ ಪಟ್ಟದ್ದೇವರು ಈ ಮಕ್ಕಳ ಬಾಳಿನಲ್ಲಿ ನಾನು ಅನಾಥ ಎಂಬ ಭಾವ ಯಾವತ್ತೂ ಬರಬಾರದೆಂದು ಪ್ರತಿವರ್ಷ ತಮ್ಮ ಜನ್ಮದಿನವನ್ನು ಸುದೈವಿ ಮಕ್ಕಳ ಜನ್ಮದಿನವಾಗಿ ಆಚರಿಸುವ ಮೂಲಕ ಸಮಾಜಕ್ಕೆ ಆದರ್ಶ ಸಂದೇಶ ರವಾನಿಸಿದ್ದಾರೆ.

**ಕಾನೂನುಬದ್ಧ ದತ್ತು:** ಸರಕಾರದ ಮಾರ್ಗದರ್ಶಿ ಸೂತ್ರಗಳು ಹಾಗೂ ದತ್ತು ಕಾಯಿದೆ ಪ್ರಕಾರ ಸ್ವದೇಶಿ ದತ್ತು ಕೇಂದ್ರದಲ್ಲಿನ ಸುಮಾರು ನೂರು ಮಕ್ಕಳನ್ನು, ಅರ್ಹ ಪೋಷಕರಿಗೆ ನ್ಯಾಯಾಧೀಶರ ಹಾಗೂ ಜಿಲ್ಲಾಧಿಕಾರಿಯವರ ಮುಖಾಂತರ ನೀಡಿರುವುದು ವಿಶೇಷ. ಅದೇ ರೀತಿ ವಿಶೇಷಚೇತನ ಮಕ್ಕಳ ಉಪಚಾರದ ಜತೆಗೆ ವಿಶೇಷ ಬುದ್ಧಿಮಾಂದ್ಯ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಬೆಂಗಳೂರಿನ ಖ್ಯಾತ ಮನೋವೈದ್ಯ ಡಾ.ಸಿ.ಆರ್.ಚಂದ್ರಶೇಖರ್ ಅವರಿಂದ ಆಪ್ತ ಸಮಾಲೋಚನೆ ಮಾಡಿಸುತ್ತಿರುವ ಕಾರ್ಯ ಅತ್ಯಂತ ಮಹತ್ವದಾದದ್ದು.

ಈ ಪೈಕಿ ದಿವ್ಯಾಂಜಲಿ ಎಂಬ ಹುಡುಗಿ ಕೆಲ ತಿಂಗಳುಗಳ ಹಿಂದೆ ಝೀ ಟಿವಿಯ ಮಹಾನಟಿ ಸ್ಪರ್ಧೆಗೆ ಆಯ್ಕೆ ಆಗುವ ಮೂಲಕ ಪಟ್ಟದ್ದೇವರ ಸಾಮಾಜಿಕ ಕಾರ್ಯ ಎಷ್ಟೊಂದು ಎತ್ತರದ್ದು ಎನ್ನುವುದಕ್ಕೆ ತಾಜಾ ನಿದರ್ಶನ ಆಗಿದ್ದಾಳೆ.

**ಹಿರೇಮಠ ಸಂಸ್ಥಾನ ವಿದ್ಯಾಪೀಠ:** 1992ರಲ್ಲಿ 40 ವಿದ್ಯಾರ್ಥಿಗಳು, ಇಬ್ಬರು ಶಿಕ್ಷಕರಿಂದ ಆರಂಭಿಸಿದ ಈ ಶಿಕ್ಷಣ ಸಂಸ್ಥೆಯಲ್ಲಿ ಇಂದು ಸುಮಾರು 20 ಸಾವಿರ ವಿದ್ಯಾರ್ಥಿಗಳು, 2 ಸಾವಿರ ಶಿಕ್ಷಕರು ಹಾಗೂ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಪೂಜ್ಯರ ದೂರದೃಷ್ಟಿ, ದೃಢ ಸಂಕಲ್ಪ, ಉದಾತ್ತ ಯೋಚನೆ, ಶೈಕ್ಷಣಿಕ ಕ್ರಾಂತಿಯ ಫಲವಾಗಿ ಕಲ್ಯಾಣ ಕರ್ನಾಟಕ ಭಾಗದ ವಿದ್ಯಾರ್ಥಿಗಳ ಮತ್ತು ಶಿಕ್ಷಕ ಸಿಬ್ಬಂದಿಯ ಪಾಲಿಗೆ ಹಿರೇಮಠ ಸಂಸ್ಥಾನ ವಿದ್ಯಾಪೀಠವು ವರದಾನವಾಗಿ ಪರಿಣಮಿಸಿದೆ. ಸಾವಿರಾರು ಜನ ಬಡ, ಪ್ರತಿಭಾನ್ವಿತ ವಿದ್ಯಾರ್ಥಿಗಳು ಈ ಶಿಕ್ಷಣ ಸಂಸ್ಥೆಯಲ್ಲಿ ಕಲಿತು ದೇಶದ ವಿವಿಧ ಕಡೆ ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಪೂಜ್ಯರ ಕಾರ್ಯ ಅಸಂಖ್ಯ:** ಡಾ.ಬಸವಲಿಂಗ ಪಟ್ಟದ್ದೇವರು ತಮ್ಮ ಜೀವನದುದ್ದಕ್ಕೂ ಕೈಗೊಂಡಿರುವ ಅಸಂಖ್ಯ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಪ್ರಗತಿಪರ, ದಲಿತೋದ್ಧಾರಕ, ಮಾನವೀಯ, ರಚನಾತ್ಮಕ ಕಾರ್ಯಗಳು ಸಮಾಜದ ಸರ್ವರಿಗೂ ಮಾದರಿ. ಬಸವಲಿಂಗ ಪಟ್ಟದ್ದೇವರು ಬಸವಾದಿ ಶರಣರು ತೋರಿರುವ ಮಾರ್ಗ ಮತ್ತು ತತ್ವಗಳಲ್ಲಿ ನಂಬಿಕೆ ಇಟ್ಟು, ಬದುಕುತ್ತಿರುವ



ಮಹಾನ್ ಕರುಣಾಮಯಿಗಳು. ಇವರು ಹಿರೇಮಠದ ಪೀಠಾಧಿಪತಿ ಆದಾಗಿನಿಂದ ಇಲ್ಲಿಯವರೆಗೆ ಕೈಗೊಂಡಿರುವ ಸಮಾಜಮುಖಿ ಕಾರ್ಯಗಳು ಅಸಂಖ್ಯ.

ಶ್ರೀಗಳು ಬದುಕಿರುವ ರೀತಿ ಸಮಾಜದ ಸರ್ವರಿಗೂ ಮಾದರಿ. ಪಟ್ಟದ್ದೇವರು ಅವರು ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಸಲ್ಲಿಸಿದ ದಣಿವರಿಯದ ಆದರ್ಶ ಸೇವೆಯನ್ನು ಪರಿಗಣಿಸಿ ರಾಜ್ಯ ಸರಕಾರವು ಅವರ ಜನ್ಮದಿನವಾದ ಆಗಸ್ಟ್ 25ನ್ನು ಪರಿತ್ಯಕ್ತ ಮಕ್ಕಳ ಜನ್ಮದಿನವನ್ನಾಗಿ ಘೋಷಿಸಬೇಕು.

**ಹಲವು ಪ್ರಶಸ್ತಿ, ಪುರಸ್ಕಾರ**

ಬಸವಲಿಂಗ ಪಟ್ಟದ್ದೇವರ ಸಾಮಾಜಿಕ, ಮೇರು ವ್ಯಕ್ತಿತ್ವದ ಮಾನವೀಯ, ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ದಲಿತೋದ್ಧಾರಕ, ಪ್ರಗತಿಪರ ಕಾರ್ಯಗಳನ್ನು ಪರಿಗಣಿಸಿ ಗುಲಬರ್ಗಾ ವಿಶ್ವವಿದ್ಯಾಲಯವು ಅವರಿಗೆ ಗೌರವ ಡಾಕ್ಟರೇಟ್ ನೀಡಿದೆ. ರಾಜ್ಯ ಸರಕಾರದಿಂದ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕರ್ನಾಟಕ ಏಕೀಕರಣ ಪ್ರಶಸ್ತಿ ಲಭಿಸಿವೆ. ಈಚೆಗೆ ಹಂಪಿ ಕನ್ನಡ ವಿಶ್ವವಿದ್ಯಾಲಯ ಕೂಡ ಪಟ್ಟದ್ದೇವರಿಗೆ ನಾಡೋಜ ಗೌರವ ನೀಡಿ ಆ ಪ್ರಶಸ್ತಿಯ ಘನತೆಯನ್ನು ಇನ್ನಷ್ಟು ಎತ್ತರಕ್ಕೆ ಹೆಚ್ಚುವಂತೆ ಮಾಡಿದೆ.

**- ಶಶಿಧರ** ಕೋಸಂಬೆ

# ಹಾಡುವ ಕತ್ತೆಯ ಕಥೆ

ಒಂದೂರಿನಲ್ಲಿ ಒಂದು ಕತ್ತೆಯಿತ್ತು. ಅದು ಹಗಲುಹೊತ್ತು ಅಗಸನ ಮನೆಯಲ್ಲಿ ಭಾರಗಳನ್ನು ಹೊರುವುದು: ರಾತ್ರಿಯಹೊತ್ತು ಮನ ಬಂದಂತೆ ಅಲೆಯುವುದು: ಮತ್ತೆ ಬೆಳಗಾಗುತ್ತಲೂ ಅಗಸನ ಮನೆಗೇ ಬಂದುಬಿಡುವುದು.

ಹೀಗಿರಲು, ರಾತ್ರಿಯ ಹೊತ್ತು ಸ್ವೇಚ್ಛೆಯಾಗಿ ತಿರುಗುವ ಕತ್ತೆಗೂ ಒಂದು ನರಿಗೂ ಸ್ನೇಹವು ಬೆಳೆಯಿತು. ಅವೆರಡೂ ನಿತ್ಯವೂ ಇರಳು ಎಲ್ಲೆಂದರಲ್ಲಿ ಮೇದುಕೊಂಡು ಸುಖವಾಗಿದ್ದುವು. ಒಂದು ದಿನ ಎರಡೂ ಸೌತೆಯಕಾಯಿ ಬೆಳೆದಿರುವ ಹೊಲಕ್ಕೆ ನುಗ್ಗಿವೆ: ಆನಂದವಾ ಮೆಯ್ದಿವೆ: ಆ ಹೊತ್ತಿಗೆ ಸರಿಯಾಗಿ ಚಂದ್ರನು ಹುಟ್ಟಿ ಬೆಳುದಿಂಗಳು ಎಲ್ಲೆಲ್ಲೂ ಹರಡಿತು. ತಂಗಾಳಿಯು ಬೀಸಿತು. ಆಗ ಕತ್ತೆಗೆ ಒಂದು ಹಾಡು ಹಾಡಬೇಕು ಎನ್ನಿಸಿತು.



ನರಿಯನ್ನು ಕರೆದು, ಮಿತ್ರ ಹಾಡಬೇಕು ಎನ್ನಿಸುತ್ತಿದೆ. ಏನು ಮಾಡಲಿ? ಎಂದು ಜಂಭವಾಗಿ ಕೇಳಿತು. ಅದಕ್ಕೆ ಆ ನರಿಯು ಮಾವ, ಬಾಯಿಬಿಟ್ಟೀಯೇ ಕದಿಯುವುದಕೆ ಬಂದವರು

ಬಾಯಿ ಹೊಲಿದುಕೊಂಡಿರಬೇಕು ಅಲ್ಲದೆ, ನಿನ್ನ ಸ್ವರವೂ ಚೆನ್ನಾಗಿಲ್ಲ. ನೀನು ಕೂಗಿದರೆ ದೂರದಲ್ಲಿದವರಿಗೂ ಕೇಳಿಸಿ ನಿನ್ನ ಕೆಲಸವು ಮುಗಿಯುವುದು. ಸುಮ್ಮನಿದ್ದು ಬೇಕಾದಷ್ಟು, ತಿಂದು ಹೋಗೋಣ ಎಂದು ಎಷ್ಟೋ ಹೇಳಿತು.

ಕತ್ತೆಯು ಅದನ್ನು ಕೇಳಿ ಎಷ್ಟೇ ಆಗಲಿ ನೀನು ಕಾಡಿನ ಜಂತು. ನಿನಗೆ ಸಂಗೀತದ ಸೊಗಸೇನು ಗೊತ್ತು

ಕತ್ತಲನು ಚಂದ್ರಿಕೆಯು ದೂಡಿದಂದು
ಪ್ರಿಯ ಜನರು ಪ್ರೀತಿಯಿಂ ಸೇರಿದಂದು
ಸಂಗೀತ ಕೇಳದಿರೆ ಧನ್ಯರೆಂತು?

ಎಂದಿತು. ನರಿಯು ಮಾವ ಅದಿರಲಿ, ನಿನಗೆ ಸಂಗೀತವೇನು ಗೊತ್ತು? ಸುಮ್ಮನೆ ಅರಚುವೆ. ಅದರಿಂದ ನಮ್ಮ ಕೆಲಸವು ಕೆಡುವುದು. ಅಷ್ಟೇ ಫಲ ಎಂದಿತು. ಕತ್ತೆಗೆ ಕೋಪ ಬಂದು ನನಗೆ ಸಂಗೀತವು ತಿಳಿಯದೆ? ಸಪ್ತ ಸ್ವರಗಳು, ತಾಳಗಳು ನಲವತ್ತೊಂಭತ್ತು, ಅರವತ್ತಮೂರು ರಾಗಗಳು, ಭರತ ಮುನಿಯು ಇದರ ಕರ್ತೃ. ಇನ್ನೇನು ಬೇಕು ಕೇಳು ಎಂದು ಗದರಿಸಿತು. ನರಿಯು ಹಾಗಾದರೆ, ಮಾವ, ನಾನು ಕಾವಲಿನವನು ಬರುವುದನ್ನು ನೋಡಿಕೊಳ್ಳುತ್ತಾ ದೂರದಲ್ಲಿ ಕಾಯ್ದುಕೊಂಡಿರುವೆನು. ನಿನಗೆ ತೋರಿದ ಹಾಗೆ ಹಾಡಿಕೋ ಎಂದು ತಾನು ದೂರವಾಗಿ ಹೋಯಿತು. ಕತ್ತೆಯೂ ಹಾಡಿತು.

ಅದನ್ನು ಕೇಳಿ ಹೊಲದ ಯಜಮಾನನು ದೊಣ್ಣೆಯನ್ನು ಎತ್ತಿ ಕೊಂಡು ಬಂದು ಚೆನ್ನಾಗಿ ಹೊಡೆದು ನೆಲಕ್ಕೆ ಕೆಡವಿ, ಒಂದು ಬೀಸುವ ಕಲ್ಲನ್ನು ಅದರ ಕತ್ತಿಗೆ ಕಟ್ಟಿದನು. ಕತ್ತೆಯೂ ಒಂದು ಘಳಿಗೆ ನೋವನ್ನು ಅನುಭವಿಸುತ್ತಿದ್ದು ಮತ್ತೆ ಎದ್ದು ಹೊರಟಿತು.

> **ನಿತ್ಯವೂ ಇರಳು ಎಲ್ಲೆಂದರಲ್ಲಿ ಮೇದುಕೊಂಡು ಸುಖವಾಗಿದ್ದುವು. ಒಂದು ದಿನ ಎರಡೂ ಸೌತೆಯಕಾಯಿ ಬೆಳೆದಿರುವ ಹೊಲಕ್ಕೆ ನುಗ್ಗಿವೆ: ಆನಂದವಾ ಮೆಯ್ದಿವೆ: ಆ ಹೊತ್ತಿಗೆ ಸರಿಯಾಗಿ ಚಂದ್ರನು ಹುಟ್ಟಿ ಬೆಳುದಿಂಗಳು ಎಲ್ಲೆಲ್ಲೂ ಹರಡಿತು.**

ನಾಯಿ ಕತ್ತೆಯು ಕುದುರೆ ಎಲ್ಲಕಿಂತಲು ಕತ್ತೆ
ಹೊಡೆದ ಏಟಿನ ನೋವ ಕಳೆದುಕೊಂಬುವು ಕೂಡಲೆ
ನರಿಯು ದೂರದಿಂದ ಅದನ್ನು ನೋಡಿ ಹೇಳಿತು;
ಬೇಡೆಂದರೆ ಬಿಡದೇ ಹಾಡಿದ ಮಾವನಿಗೆ
ಬೀಸುವ ಕಲ್ಲಿನ ಸರವಾಯಿತು ಕೊರಳೊಳಗೆ
ನೀನೂ ಹಾಗೆಯೇ ಹೇಳಿದ ಮಾತು ಕೇಳದೆ ಹೀಗಾದೆ ಎನ್ನಲು ಚಕ್ರಧರನು ಹೌದು ಹೌದು ಕೇಳಿಲ್ಲವೇ?
ತನಗುಂ ಮತಿಯಿಲ್ಲದೆ । ಮಿತ್ರನ ನುಡಿಕೇಳದೆ ॥
ನಡೆದರೆ ಮರಣನೆ ಫಲ। ಮಂಥರಗಾಹಂತೆ
ಸುವರ್ಣಸಿದ್ಧಿಯು ಕೇಳಿದನು; ಅದೆಂತು? ಚಕ್ರಧರನು ಹೇಳಿದನು:-



**ಮಾರಾಟ ಛೇ,** ಬದುಕು ಇಲ್ಲಿಗೆ ತಂದು ನಿಲ್ಲಿಸಿ ಬಿಟ್ಟಿದೆ. ಬೀದಿ ಬೀದಿ ತಿರುಗಾಡಿ ಯಾರಿಗಾದರೂ ಮನೆ ಬಾಡಿಗೆಗೆ ಬೇಕಾದರೆ ಸಂಪರ್ಕಿಸಿ, ಸೈಟುಗಳು ಕೊಳ್ಳುವವರಿದ್ದರೆ ವಿಚಾರಿಸಿ ಹೀಗೆ ಕರಪತ್ರಗಳನ್ನ ಹಂಚಬೇಕಾಗಿದೆ. ಈ ಕರಪತ್ರಗಳನ್ನು ನೋಡಿ ಯಾರಾದರೂ ಕೊಳ್ಳುವವರು ಬಂದುಬಿಟ್ಟರೆ ನಮ್ಮ ತಿಂಗಳ ಸಂಬಳ ಬಂದಂತೆ. ಬಾರದೆ ಹೋದ್ರೆ, ಉಪವಾಸ ಒಂದೇ ನಮ್ಮ ಜೊತೆಗಾರನಾಗಿರುತ್ತಾನೆ. ಬದುಕು ಹೀಗೆ ಇರಲಿಲ್ಲ. ತುಂಬಾ ಶ್ರೀಮಂತರಂತೆ ನಾವು ಅಜ್ಜ ತಾವು ಕಷ್ಟಪಟ್ಟು ಕೃಷಿ ಭೂಮಿಯನ್ನು ಸಂಪಾದಿಸಿದರು.

ಅಪ್ಪನಿಗೆ ಯಾಕೋ ಕುಡಿತದ ಚಟ ಹತ್ತಿತು. ತನ್ನ ಸಣ್ಣ ಪುಟ್ಟ ಸಾಲಕ್ಕೆ ಮನೆಯ ನೆಲ ಒಂದನ್ನ ಬಿಟ್ಟು ಎಲ್ಲವನ್ನು ಮಾರಾಟ ಮಾಡಿಬಿಟ್ಟ ಅಮ್ಮನ ಆರೋಗ್ಯ ಕೆಟ್ಟಾಗ ಅದನ್ನು ಮಾರಬೇಕಾದ ಪರಿಸ್ಥಿತಿ ನಿರ್ಮಾಣ ಆಯಿತು. ಅಪ್ಪ ಮಾರಿದ್ದು ಮಾತ್ರ. ಆದರೆ ಅದರ ಬೆಲೆ ಕಟ್ಟುತ್ತಾ ಇರೋನು ನಾನು.

**- ಧೀರಜ್** ಬೆಳ್ಳಾರೆ

# 7 ಸಂಸದರೊಂದಿಗೆ ಬಿಜೆಪಿ ಸೇರಿದ ರಾಘವ್ ಛಡ್ಡಾ

## ದೆಹಲಿಯಲ್ಲಿ ಕ್ಷಿಪ್ರ ರಾಜಕೀಯ ಬೆಳವಣಿಗೆ | ಎಎಪಿಗೆ ಭಾರೀ ಆಘಾತ

• ಪ್ರಜೋದಯ ವರದಿ

**ನವದೆಹಲಿ:** ರಾಜ್ಯಸಭೆಯಲ್ಲಿ ತೀಕ್ಷ್ಣ ಮಾತುಗಳ ಮೂಲಕ ಏಕಾಏಕಿ ತಾರಾ ಪ್ರಚಾರಕರಾಗಿ ಹೊರಹೊಮ್ಮಿದ್ದ ಆಮ್ ಆದ್ಮಿ ಪಕ್ಷದ ರಾಜ್ಯಸಭೆ ಸದಸ್ಯ ರಾಘವ್ ಛಡ್ಡಾ ಸೇರಿ 7 ಸಂಸದರು ಶುಕ್ರವಾರ ಬಿಜೆಪಿ ಸೇರ್ಪಡೆಯಾಗಿದ್ದಾರೆ.



ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಛಡ್ಡಾ, ಎಎಪಿಯ 10 ಮಂದಿ ರಾಜ್ಯಸಭಾ ಸದಸ್ಯರಲ್ಲಿ ಏಳು ಮಂದಿ ಬಿಜೆಪಿ ಸೇರಿಕೊಳ್ಳುತ್ತಿದ್ದಾರೆ. ನಾನೂ ಸೇರಿ ಎಎಪಿಯ 7 ಸಂಸದರು ಬಿಜೆಪಿ ಸೇರಿದ್ದೇವೆ ಎಂದಿದ್ದಾರೆ. ರಾಘವ್ ಛಡ್ಡಾ, ಸಂದೀಪ್ ಪಾಠಕ್, ಅಶೋಕ್ ಕುಮಾರ್ ಮಿತ್ತಲ್, ಹರಭಜನ್ ಸಿಂಗ್, ರಾಜಿಂದರ್ ಗುಪ್ತಾ, ವಿಕ್ರಮ್ ಸಾಹ್ನಿ, ಸ್ವಾತಿ ಮಾಲಿವಾಲ್ ಎಎಪಿ ತೊರೆದಿದ್ದಾರೆ. ರಾಜ್ಯಸಭೆಯ ಉಪನಾಯಕ ಸ್ಥಾನದಿಂದ ರಾಘವ್ ಛಡ್ಡಾ ಅವರನ್ನು ಇತ್ತೀಚೆಗೆ ಎಎಪಿ ಕೆಳಗಿಳಿಸಿತ್ತು. ಛಡ್ಡಾ ಅವರು ಸಂಸತ್ತಿನಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಧ್ವನಿ ಎತ್ತಲು ಹಿಂದೇಟು ಹಾಕುತ್ತಾರೆ. ಬದಲಾಗಿ ಅಷ್ಟೇನೂ ಮುಖ್ಯವಲ್ಲದ ವಿಷಯಗಳ ಬಗ್ಗೆ ಚರ್ಚಿಸಿ, ಸಾಫ್ಟ್ ಪಿಆರ್ (ತಮ್ಮನ್ನು ತಾವು ಬಿಂಬಿಸಿಕೊಳ್ಳುವ ಪ್ರಚಾರ ತಂತ್ರ) ಕೆಲಸ ಮಾಡುತ್ತಾರೆ ಎಂದೂ ಎಎಪಿ ಆರೋಪಿಸಿತ್ತು.

ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಯಾಗಿರುವ ಸಂದೀಪ್ ಪಾಠಕ್ 2022ರಿಂದ ಪಂಜಾಬ್‌ನ ರಾಜ್ಯಸಭಾ ಸಂಸದರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ರಾಜಕೀಯಕ್ಕೆ ಬರುವ ಮೊದಲು ಅವರು ಐಐಟಿ ದೆಹಲಿಯಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದರು. ಅಶೋಕ್ ಕುಮಾರ್ ಮಿತ್ತಲ್ ಅವರನ್ನು ರಾಜ್ಯಸಭೆಯ ಉಪ ನಾಯಕನಾಗಿ ಇತ್ತೀಚೆಗೆ ನೇಮಕ ಮಾಡಲಾಗಿತ್ತು. ಅದರ ಬೆನ್ನಲ್ಲೇ ಅವರಿಗೆ ಸಂಬಂಧಿಸಿದ ಶೈಕ್ಷಣಿಕ ಸಂಸ್ಥೆಗಳು ಮತ್ತು ಇತರ ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯವು ಶೋಧ ನಡೆಸಿತ್ತು. ಕ್ರಿಕೆಟಿಗ ಹರ್ಭಜನ್ ಸಿಂಗ್ ಕೂಡ ರಾಜೀನಾಮೆ ಸಲ್ಲಿಸಿದ್ದಾರೆ. ಪಂಜಾಬ್ ಮೂಲದ ಕೈಗಾರಿಕೋದ್ಯಮಿ ಮತ್ತು ರಾಜ್ಯಸಭಾ ಸಂಸದ ರಾಜಿಂದರ್ ಗುಪ್ತಾ ಅವರು 2025ರ ನವೆಂಬರ್‌ನಿಂದ ರಾಜ್ಯಸಭೆ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಉದ್ಯಮಿ, ಶಿಕ್ಷಣ ತಜ್ಞ ವಿಕ್ರಮ್ ಸಾಹ್ನಿ ಅವರು 2022ರಲ್ಲಿ ಪಂಜಾಬ್‌ನಿಂದ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ದೆಹಲಿ ಮಹಿಳಾ ಆಯೋಗದ ಅಧ್ಯಕ್ಷೆಯಾಗಿದ್ದ ಸ್ವಾತಿ ಅವರು ಹೋರಾಟಗಾರ್ತಿಯೆಂದು ಗುರುತಿಸಿಕೊಂಡವರು. ರಾಜ್ಯಸಭಾ ಸದಸ್ಯೆಯಾಗಿರುವ ಮಾಲಿವಾಲ್, ಕಳೆದ ವರ್ಷ ಎಎಪಿ ವಿರುದ್ಧ ಬಂಡಾಯ ಎದ್ದಿದ್ದರು.

### ಒಡಕು ಮೂಡಿಸಲು ಚಡ್ಡಾ ಬಳಕೆ

ಸಂಸದ ರಾಘವ ಛಡ್ಡಾರನ್ನು ದಾಳವಾಗಿ ಬಳಸಿಕೊಂಡು ಪಕ್ಷದಲ್ಲಿ ಒಡಕು ಉಂಟು ಮಾಡಲು ಬಿಜೆಪಿ ಪ್ರಯತ್ನಿಸುತ್ತಿದೆ ಎಂದು ಎಎಪಿ ಪಂಜಾಬ್ ಘಟಕ ಆರೋಪಿಸಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿಯ ಪಂಜಾಬ್‌ನ ಮುಖ್ಯ ವಕ್ತಾರ ಬಲ್ತೇಜ್ ಪನ್ನೂ ಅವರು, ಅರವಿಂದ ಕೇಜ್ರಿವಾಲ್ ನೇತೃತ್ವದ ಸಂಘಟನೆಯ ಶಕ್ತಿಯನ್ನು ಕುಂದಿಸಲು, ಸಂಸತ್ತಿನಲ್ಲಿ ಅದರ ಧ್ವನಿಯನ್ನು ಅಡಗಿಸಲು ಗೃಹ ಸಚಿವ ಅಮಿತ್ ಶಾ ಅವರು ರಾಘವ್ ಛಡ್ಡಾ ಮೂಲಕ ಎಎಪಿ ಸಂಸದರನ್ನು ಸೆಳೆಯಲು ಪ್ರಯತ್ನಿಸುತ್ತಿದ್ದಾರೆ. ಆದರೆ ಎಎಪಿ ಶಾಸಕರು ಮತ್ತು ಸಂಸದರು ಒಗ್ಗಟ್ಟಾಗಿದ್ದಾರೆಂದು ಆರೋಪಿಸಿದ್ದಾರೆ. ಏಳು ಸಂಸದರನ್ನು ಸೆಳೆದು ತಂದರೆ ಅವರನ್ನು ಸಚಿವರನ್ನಾಗಿ ಮಾಡಲಾಗುವುದೆಂದು ರಾಘವ್ ಛಡ್ಡಾಗೆ ಅಮಿತ್ ಶಾ ಭರವಸೆ ನೀಡಿದ್ದಾರೆ ಎನ್ನುವುದು ನಮಗೆ ಗೊತ್ತಾಗಿದೆ ಎಂದು ಪನ್ನೂ ದೂರಿದ್ದಾರೆ.

# ಸಂಭ್ರಮದ ಮಿಡಿಚಲಮ್ಮ ತಾಯಿ ಜಾತ್ರೆ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನ ಹೊಸ ಉತ್ತತ್ತನಹಳ್ಳಿ ಗ್ರಾಮದಲ್ಲಿ ಗ್ರಾಮದ ಅಧಿಷ್ಠಾತ್ರ ದೇವಿ ಮಿಡಿಚಲಮ್ಮ ತಾಯಿಯ ಜಾತ್ರೋತ್ಸವವು ಭಕ್ತಿ ಭಾವದಿಂದ ಹಾಗೂ ವೈಭವದಿಂದ ನೆರವೇರಿತು. ಗ್ರಾಮಸ್ಥರು, ಸುತ್ತ ಮುತ್ತಲಿನ ಹಳ್ಳಿಗಳ ಭಕ್ತರು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿ ದೇವಿಯ ಆಶೀರ್ವಾದ ಪಡೆದರು.



ಜಾತ್ರೆಯ ಅಂಗವಾಗಿ ಬೆಳಗಿನ ಜಾವದಿಂದಲೇ ದೇವಸ್ಥಾನದಲ್ಲಿ ವಿಶೇಷ ಪೂಜೆ, ಅಭಿಷೇಕ, ಅಲಂಕಾರ ಹಾಗೂ ಹೋಮ- ಹವನ ಕಾರ್ಯಕ್ರಮಗಳು ನಡೆದವು. ಪೂಜಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಭಕ್ತರು ದೇವಿಗೆ ಕಾಯಿ- ಹಣ್ಣು, ಪುಷ್ಪ ಹಾಗೂ ಹರಕೆಗಳನ್ನು ಸಮರ್ಪಿಸಿದರು. ಗ್ರಾಮ ಹಿರಿಯರು ಹಾಗೂ ಅರ್ಚಕರು ವೇದ ಮಂತ್ರಗಳೊಂದಿಗೆ ಪೂಜೆಯನ್ನು ನೆರವೇರಿಸಿದರು.

ಮಧ್ಯಾಹ್ನ ವೇಳೆಗೆ ಮಿಡಿಚಲಮ್ಮ ತಾಯಿಯ ಉತ್ಸವ ಮೂರ್ತಿಯನ್ನು ಅಡ್ಡ ಪಲ್ಲಕ್ಕಿ ಮೂಲಕ ಗ್ರಾಮ ಸುತ್ತಲೂ ಭವ್ಯ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ತಾಳ ಮದ್ದಳೆ, ಡೊಳ್ಳು-ಕುಣಿತ, ಹಾಗೂ ಜನಪದ ಕಲಾ ತಂಡಗಳು ಭಾಗವಹಿಸಿ ಸಂಭ್ರಮ ಹೆಚ್ಚಿಸಿತು. ಮಹಿಳೆಯರು ಹಾರತಿ ತೆಗೆದು ದೇವಿಯನ್ನು ಬರಮಾಡಿಕೊಂಡರು.

ಜಾತ್ರೆಯ ಪ್ರಮುಖ ಆಕರ್ಷಣೆಯಾಗಿ ಭಕ್ತರಿಂದ ವಿಶೇಷ ಹರಕೆಗಳ ಸಮರ್ಪಣೆ ಮಾಡಿದರು. ಕೆಲ ಭಕ್ತರು ತಮ್ಮ ಮನೋವಾಂಛೆಗಳು ನೆರವೇರಿದ ಹಿನ್ನೆಲೆಯಲ್ಲಿ ದೇವಿಗೆ ವಿಶೇಷ ಕಾಣಿಕೆಗಳನ್ನು ಸಮರ್ಪಿಸಿದರು.

ನಂತರದಲ್ಲಿ ಮಹಾಪೂಜೆ ಹಾಗೂ ಪ್ರಸಾದ ವಿತರಣೆ ನಡೆಯಿತು. ಭಕ್ತರಿಗೆ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿದ್ದು, ಸಾವಿರಾರು ಜನರು ಭಾಗವಹಿಸಿ ಪ್ರಸಾದ ಸ್ವೀಕರಿಸಿದರು. ಜಾತ್ರೆಯ ಸಂದರ್ಭದಲ್ಲಿ ಗ್ರಾಮದಲ್ಲಿ ಉತ್ಸವದ ವಾತಾವರಣ ಕಂಗೊಳಿಸಿತು.

ಚನ್ನಕೇಶವ ದೇಗುಲ ಮಾಜಿ ಧರ್ಮದರ್ಶಿ ಯು.ಟಿ. ಕೇಶವಮೂರ್ತಿ, ಸನ್ಯಾಸಿಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಶಿವು,ಬಾಳೆಹಣ್ಣು ರಮೇಶ್ ಸೇರಿದಂತೆ ಗ್ರಾಮದ ಮುಖಂಡರು ಭಕ್ತಾಧಿಗಳು ಹಾಜರಿದ್ದರು.

# ಸಕಲ ಜೀವಿಗಳ ದಾಹ ತಣಿಸಿದ ಮಹಾತ್ಮ ಭಗೀರಥ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಭಗೀರಥ ಮಹರ್ಷಿ ತನ್ನ ಕಠಿಣ ತಪಸ್ಸಿನಿಂದ ಗಂಗೆಯನ್ನು ಭೂಮಿಗೆ ಇಳಿಸಿ, ಭೂ ಲೋಕದ ಸಕಲ ಜೀವಿಗಳ ದಾಹ ತಣಿಸಿದ ಮಹಾತ್ಮ ಎಂದು ತಹಶೀಲ್ದಾರ್ ಜಿ. ಎಸ್. ಶಂಕರಪ ತಿಳಿಸಿದರು.



ಪಟ್ಟಣದ ಮಿನಿ ವಿಧಾನಸೌಧದ ಆವರಣದಲ್ಲಿ ತಾಲೂಕು ಆಡಳಿತ ಹಾಗೂ ತಾಲೂಕು ಉಪ್ಪಾರ ಸಂಘದಿಂದ ಆಯೋಜಿಸಿದ್ದ ಭಗೀರಥ ಜಯಂತಿ ಕಾರ್ಯಕ್ರಮದಲ್ಲಿ ಭಗೀರಥ ಮಹರ್ಷಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿ, ಭಾರತೀಯ ಸಂಸ್ಕೃತಿ ಇಡೀ ಪ್ರಪಂಚದಲ್ಲಿಯೇ ವಿಶಿಷ್ಟತೆ ಹೊಂದಿದ್ದು, ಅನೇಕ ದಾರ್ಶನಿಕರು, ಸಾಧು ಸಂತರು, ಸತ್ಪುರುಷರನ್ನು ಪ್ರಪಂಚಕ್ಕೆ ಕೊಡುಗೆ ನೀಡಿದೆ. ಇವರೆಲ್ಲರೂ ಸಕಲ ಮನುಕುಲಕ್ಕೆ ದಾರಿ ದೀಪವಾಗಿದ್ದಾರೆ. ಅಂಥ ಸತ್ಪುರುಷರಲ್ಲಿ ಭಗೀರಥ ಮಹರ್ಷಿ ಪ್ರಮುಖರು ಎಂದರು.

ದಾರ್ಶನಿಕರ ಸಾಧನೆ ಅವರು ನಡೆದು ಬಂದ ಕಷ್ಟಗಳ ಹಾದಿ ತಿಳಿಸುತ್ತದೆ. ಮಹಾರಾಜರಾಗಿದ್ದ ಭಗೀರಥರು ತ್ಯಾಗ, ಹಟ, ಛಲದಿಂದ ಸಾಧನೆ ಮಾಡಿದರು. ಪ್ರತಿಯೊಬ್ಬರೂ ತಮ್ಮಗುರಿ ಮುಟ್ಟಲು ಅಥವಾ ಸಾಧನೆ ಮಾಡಲು ಭಗೀರಥರ ಸತತ ಪರಿಶ್ರಮ, ತ್ಯಾಗ, ಛಲ, ಸದ್ಗುಣಗಳನ್ನು ಅನುಸರಿಸಬೇಕು. ಎಲ್ಲ ದಾರ್ಶನಿಕರ ಜೀವನ ಚರಿತ್ರೆ, ಜೀವನಗಾಥೆ, ಮೌಲ್ಯವನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಮಹರ್ಷಿ ಭಗೀರಥರು ತಮ್ಮ ತಪಸ್ಸಿನ ಶಕ್ತಿಯಿಂದ ಗಂಗೆಯನ್ನು ಧರೆಗೆ ತರುವ ಮೂಲಕ ಮಹಾಪುರುಷರು ಆಧ್ಯಾತ್ಮಿಕ ನಾಯಕರಾಗಿದ್ದಾರೆ. ಹಾಗೂ ಇಂಥ ಮಹಾಪುರುಷ ಜಯಂತಿ ನಮ್ಮೆಲ್ಲರ ಜೀವನದ ಪ್ರೇರಣಾ ಶಕ್ತಿಯಾಗಿದೆ. ಭಗೀರಥ ಮಹರ್ಷಿಗಳ ಜಯಂತಿ ಆಚರಣೆ ಮಾಡುವ ಜೊತೆಗೆ ಅವರ ಕೊಡುಗೆಯನ್ನು ಸ್ಮರಣೆ ಮಾಡಿಕೊಳ್ಳೋಣ. ಅವರು ಗಂಗೆಯನ್ನು ಧರೆಗೆ ತರಲು ಪಟ್ಟ ಪ್ರಯತ್ನ ಹೆಚ್ಚಿನದಾಗಿದೆ. ಇಂಥ ಮಹಾ ಪುರುಷರ ಜಯಂತಿಯನ್ನು ಆಚರಣೆ ಮಾಡುವ ಮೂಲಕ ಜಗತ್ತಿಗೆ ಹಾಗೂ ಮುಂದಿನ ಪೀಳಿಗೆಗೆ ಅವರ ತತ್ವ, ಆದರ್ಶಗಳನ್ನು ತಿಳಿಸೋಣ ಎಂದರು.

ಉಪ್ಪಾರ ಸಮಾಜದ ಅಧ್ಯಕ್ಷ ಜನಾರ್ದನ್, ಕಾರ್ಯದರ್ಶಿ ವಕೀಲ ನವೀನ್ ಕುಮಾರ್, ಕಂಟ್ರಾಕ್ಟರ್ ದೇವರಾಜು, ಕೆಡಿಪಿ ಸದಸ್ಯರ ಕಬ್ಬಾಳ್ ಮಹೇಶ್, ಲೋಕೇಶ್, ಸಿ.ಡಿ.ನಾಗೇಂದ್ರ, ಸುರೇಶ್, ಸತೀಶ್, ಪ್ರವೀಣ್, ನಾಗೇಶ್, ಮಂಜು, ಪಾಪಣ್ಣ ಇತರರಿದ್ದರು.

# ಎಸ್‌ಎಸ್‌ಎಲ್‌ಸಿ: ಅಗ್ರಸ್ಥಾನ ಪಡೆದವರಿಗೆ ಅಭಿನಂದನೆ

## ಶಿಕ್ಷಕರ ಸಹಕಾರ ಅತೀ ಮುಖ್ಯ : ಭಾಗ್ಯಮ್ಮ

• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ಬಿಇಒ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಭಾಗ್ಯಮ್ಮ ಅಭಿನಂದಿಸಿದರು.



ಈ ವೇಳೆ ಮಾತನಾಡಿದ ಅವರು, ಕಳೆದ ವರ್ಷದಿಂದಲೇ ನಾವು 100% ಫಲಿತಾಂಶವನ್ನು ಗುರಿಯಾಗಿಟ್ಟುಕೊಂಡಿದ್ದೇವೆ. ಪ್ರತಿ ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಕ್ರಮವಾಗಿ ಶೇ.10ರಷ್ಟು ಏರಿಕೆ ಸಾಧಿಸುವಂತೆ ಯೋಜನೆ ರೂಪಿಸಿದ್ದೆವು. ಅಂತಿಮ ಪರೀಕ್ಷೆಯಲ್ಲಿ ಶೇ.95.59 ಫಲಿತಾಂಶ ಬಂದಿದ್ದು, ಇನ್ನೂ ಶೇ.4 ಮಾತ್ರ ಗುರಿ ಉಳಿದಿದೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಅದನ್ನೂ ಸಾಧಿಸಲು ಗಟ್ಟಿಯಾದ ಯೋಜನೆ ರೂಪಿಸಿದ್ದೇವೆ ಎಂದರು.

ಶಿಕ್ಷಕರ ತಂಡದ ಸಮನ್ವಯ, ಸಂಪನ್ಮೂಲ ಶಿಕ್ಷಕರ ಮಾರ್ಗದರ್ಶನ ಹಾಗೂ ನಿರಂತರ ಪರಿಶೀಲನಾ ಸಭೆಗಳು ಉತ್ತಮ ಫಲಿತಾಂಶಕ್ಕೆ ಕಾರಣವಾಗಿವೆ. ವಿದ್ಯಾರ್ಥಿಗಳೂ ತಮ್ಮ ಸಮಸ್ಯೆಗಳನ್ನು ನೇರವಾಗಿ ಅಧಿಕಾರಿಗಳಿಗೆ ತಿಳಿಸುವ ಮಟ್ಟಕ್ಕೆ ಮುನ್ನಡೆದಿದ್ದಾರೆ. ಇದು ಶಿಕ್ಷಣ ಕ್ಷೇತ್ರದಲ್ಲಿ ಒಳ್ಳೆಯ ಬೆಳವಣಿಗೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಜಿಲ್ಲಾ ಮಟ್ಟದ ಅಧಿಕಾರಿಗಳು, ಮುಖ್ಯ ಶಿಕ್ಷಕರು, ಶಿಕ್ಷಕರು ಹಾಗೂ ಮಾಧ್ಯಮಗಳ ಸಹಕಾರವನ್ನು ಸ್ಮರಿಸಿದ ಭಾಗ್ಯಮ್ಮ, ವಿಶೇಷವಾಗಿ ಶಿಕ್ಷಕರ ಶ್ರಮವೇ ಈ ಸಾಧನೆಯ ಬೆನ್ನೆಲುಬು. ರಜಾ ದಿನಗಳನ್ನೂ ಲೆಕ್ಕಿಸದೆ, ಹಬ್ಬ-ಹರಿದಿನಗಳನ್ನೂ ಮರೆತು ವಿದ್ಯಾರ್ಥಿಗಳ ಪ್ರಗತಿಗೆ ದುಡಿದಿದ್ದಾರೆ ಎಂದು ಪ್ರಶಂಸಿಸಿದರು.

ಮೂರು ಪೂರ್ವ ಸಿದ್ಧತಾ ಪರೀಕ್ಷೆಗಳಲ್ಲಿ ಶೇ.70, ಶೇ.82 ಮತ್ತು ಶೇ.90 ಫಲಿತಾಂಶ ಬಂದಿದ್ದು, ಅಂತಿಮವಾಗಿ ಶೇ.95.59 ಸಾಧನೆ ಮಾಡಿರುವುದು ಸಂತೋಷದ ಸಂಗತಿ ಎಂದರು. ಟಾರ್ಗೆಟ್-40 ಪುಸ್ತಕ ವಿತರಣೆ, ಪ್ರೇರಣಾ ಮಾತುಗಳು, ಪೋಷಕರಿಗೆ ಪತ್ರ ಬರೆಯುವ ಕಾರ್ಯಕ್ರಮಗಳು ಹಾಗೂ ಪ್ರತಿ ಶುಕ್ರವಾರ ನಡೆಸಿದ ಟಾಪರ್ಸ್‌ಗಳ ಭವಿಷ್ಯ ಉಜ್ವಲವಾಗಲಿ ಎಂದು ಹಾರೈಸಿದ ಅವರು, ಮುಂದಿನ ವಿದ್ಯಾಭ್ಯಾಸದಲ್ಲೂ ತಾಲೂಕಿಗೆ ಕೀರ್ತಿ ತರುವಂತೆ ವಿದ್ಯಾರ್ಥಿಗಳಿಗೆ ಶುಭಾಶಯ ಕೋರಿದರು.

ಶಿವಮರಿಯಪ್ಪ, ಧನಂಜಯ್, ನವೀನ್‌ಕುಮಾರ್, ನಾರಾಯಣ್, ಮೋಹನ್ ರಾಜ್, ನವೀನ್ ಸೇರಿದಂತೆ ಇನ್ನಿತರರು ಹಾಜರಿದ್ದರು.

# ರೇಣುಕಾ ಯಲ್ಲಮ್ಮ ದೇವಿಗೆ ಪೂಜೆ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹಿರೀಸಾವೆ ಗ್ರಾಮದಲ್ಲಿ ಆರ್ಯ ಈಡಿಗ ಸಮುದಾಯವರು ಶುಕ್ರವಾರ ರೇಣುಕಾ ಯಲ್ಲಮ್ಮ ದೇವಿ ದೇವಾಲಯದ 33ನೇ ವಾರ್ಷಿಕೋತ್ಸವ ಪ್ರಯುಕ್ತ ವಿವಿಧ ವಿಶೇಷ ಪೂಜೆ ನೆರವೇರಿಸಿದರು.

ದೊಡ್ಡ ಕೆರೆಯ ಬಳಿ ವೃಶ್ಚಿಕ ಲಗ್ನದಲ್ಲಿ ಗಂಗಾ ಕಳಸ ಸ್ಥಾಪನೆ ಮಾಡಿದರು. ನಂತರ ಕೊಪ್ಪಳ ಜಿಲ್ಲೆಯ ತೆಂಗಿನಾಳು ಗ್ರಾಮದ ಶಿವರಾಯಪ್ಪ ಹುಲಿಗಮ್ಮ ಕಲಾ ತಂಡದ ಚೌಡಿಕೆ ಪದಗಳೊಂದಿಗೆ ಕಳಸದ ಮೆರವಣಿಗೆ ಪ್ರಾರಂಭವಾಯಿತು. ದೇವಾಲಯದಲ್ಲಿ ಮಹಾಗಣಪತಿ ಪೂಜೆ, ರೇಣುಕಾ ಯಲ್ಲಮ್ಮ ದೇವಿಯ ಮೂಲ ವಿಗ್ರಹಕ್ಕೆ ಪಂಚಾಮೃತ ಅಭಿಷೇಕ, ಪುಷ್ಪಾಲಂಕಾರ ನೆರವೇರಿತು. ಮಧ್ಯಾಹ್ನ ದೇವಿಯ ಮುಂದೆ ಕದಳಿ ವೃಕ್ಷ ಮತ್ತು ಕೂಶ್ಮಾಂಡ ಛೇದನ ನಡೆದು, ಮಹಾ ಮಂಗಳಾರತಿ ಜರುಗಿತು.

# ಹಾಲುಮತ ಪ್ರೀತಿ-ವಿಶ್ವಾಸದ ಪ್ರತಿರೂಪ

• ಪ್ರಜೋದಯ ವರದಿ

**ಬಾಣಾವರ:** ಹಾಲುಮತ ಸಮುದಾಯವು ಪ್ರೀತಿ ಮತ್ತು ವಿಶ್ವಾಸದ ಪ್ರತಿರೂಪವಾಗಿದೆ. ಎಲ್ಲರೂ ಪರಸ್ಪರ ಸ್ನೇಹದಿಂದ ಬದುಕುವ ಪರಂಪರೆ ಹೊಂದಿದೆ ಎಂದು ಶಿವಾನಂದಪುರಿ ಸ್ವಾಮೀಜಿ ಅವರು ಹೇಳಿದರು.



ಪಟ್ಟಣದ ಮೈಲಾರಲಿಂಗೇಶ್ವರ ಸ್ವಾಮಿ ದೇವಾಲಯದ ಮುಂಭಾಗ ಹೇಮಕುಲದ ಕುರುಬ ಸಮುದಾಯದ ವತಿಯಿಂದ ಹಮ್ಮಿಕೊಂಡಿದ್ದ ಗುರುವಂದನ ಕಾರ್ಯಕ್ರಮ ದಲ್ಲಿ ಮಾತನಾಡಿದ ಅವರು, ಕನಕದಾಸ ಅವರ ಕೀರ್ತನೆಗಳು ಕೇವಲ ಒಂದು ಸಮುದಾಯವನ್ನಷ್ಟೇ ಅಲ್ಲ, ಇಡೀ ಮನುಕುಲವನ್ನು ಉತ್ತಮ ದಾರಿಗೆ ನಡೆಸುವ ಶಕ್ತಿ ಹೊಂದಿವೆ. ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಸಮಾಜ ಶಾಂತಿ ಮತ್ತು ಸುವ್ಯವಸ್ಥೆಯಿಂದ ಕೂಡಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಮಠಗಳು ಸಮಾಜಕ್ಕೆ ದಿಕ್ಕು ತೋರಿಸುವ ಕೇಂದ್ರಗಳಾಗಿದ್ದು, ನಾಗರಿಕರನ್ನು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಅಭಿವೃದ್ಧಿಯ ಮಾರ್ಗದಲ್ಲಿ ನಡೆಸುತ್ತವೆ ಎಂದು ಹೇಳಿದರು.

ಹೊಸದುರ್ಗ ಶಾಖ ಮಠದ ಶ್ರೀ ಈಶ್ವರಾನಂದ ಸ್ವಾಮೀಜಿ ಸಾನಿಧ್ಯ ವಹಿಸಿ ಮಾತನಾಡಿ, ಜನರು ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿದ್ದರೂ, ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳುವುದು ಅತ್ಯಗತ್ಯ. ಕುರುಬ ಸಮುದಾಯವು ಇತಿಹಾಸದಿಂದಲೂ ಸಮಾಜದ ಏಳಿಗೆಗೆ ಮಹತ್ವದ ಕೊಡುಗೆ ನೀಡಿದೆ. ಯುವಜನತೆ ದುಶ್ಚಟಗಳಿಂದ ದೂರವಿದ್ದು, ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು. ತಾಯಿ-ತಂದೆಯರೊಂದಿಗೆ ಉತ್ತಮ ಬಾಂಧವ್ಯ ಇಟ್ಟುಕೊಂಡು, ಗುರುಗಳ ಮಾರ್ಗದರ್ಶನದಲ್ಲಿ ಜೀವನ ನಡೆಸಿದರೆ ಜ್ಞಾನ ಮತ್ತು ಸನ್ಮಾರ್ಗ ದೊರೆಯುತ್ತದೆ ಎಂದು ಅವರು ಹೇಳಿದರು.

ಇದೇ ವೇಳೆ ಮೈಲಾರಲಿಂಗೇಶ್ವರ ಸ್ವಾಮಿ ದೇವಾಲಯದ ಶ್ರೀ ಗುರು ಕಪಿಲಮುನಿ ಗುರುಪೀಠದ ಸಿಂಹಾಸನಾಧಿಪತಿಗಳಾದ ಶ್ರೀ ಗುರೂಜಿ ವೆಂಕಪ್ಪಯ್ಯ ಒಡೆಯರ್ ಹಾಗು ವಾರ್ಷಿಕ ಕಾರ್ಣಿಕ ನುಡಿಯುವ ರಾಮಪ್ಪಜ್ಜ ಅವರು ಆಶೀರ್ವಚನ ನೀಡಿದರು. ಪರಮೇಶ್ವರಪ್ಪ, ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಸಿ.ಶ್ರೀನಿವಾಸ್ ಮಾತನಾಡಿದರು. ಬಗರ್ ಹುಕುಂ ಸಮಿತಿಯ ನಿರ್ದೇಶಕ ಬಿ.ಎಂ.ಜಯಣ್ಣ ಇನ್ನಿತರರು ಉಪಸ್ಥಿತರಿದ್ದರು.

# ಚಿರತೆ ದಾಳಿಗೆ 2 ಕರುಗಳ ಬಲಿ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಚಿರತೆ ದಾಳಿಯಿಂದ ಎರಡು ಕರುಗಳು ಬಲಿಯಾಗಿರುವ ಘಟನೆ ತಾಲೂಕಿನ ದಂಡಿಗನಹಳ್ಳಿ ಚಿಕ್ಕಮತಿಘಟ್ಟ ಗ್ರಾಮದಲ್ಲಿ ನಡೆದಿದೆ.

ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಉಪಾಧ್ಯಕ್ಷ ಸ್ವಾಮಿಯವರ ಕೊಟ್ಟಿಗೆಯಲ್ಲಿ ಎರಡು ವರ್ಷದ ಎರಡು ಕರುಗಳನ್ನು ಕಟ್ಟಿಹಾಕಿದ್ದರು. ಆದರೆ ರಾತ್ರಿ ಸಮಯದಲ್ಲಿ ಚಿರತೆ ಕೊಟ್ಟಿಗೆಗೆ ನುಗ್ಗಿ ಕರುಗಳ ಜೀವ ತೆಗೆದಿದೆ. ಸುಮಾರು 55,000 ಬೆಲೆ ಬಾಳುವುದಾಗಿದ್ದು ಗ್ರಾಮದಲ್ಲಿ ಈ ಹಿಂದೆಯೂ ಸಹ ಹಲವಾರು ಕರುಗಳು ಚಿರತೆಗಳ ಆಕ್ರಮಣಕ್ಕೆ ಬಲಿಯಾಗಿವೆ.

ಗ್ರಾಮದಲ್ಲಿ ಜನರು ಈಗಲೂ ಸಹ ಆತಂಕದಲ್ಲಿ ಇದ್ದಾರೆ ರೈತರು, ಸಾರ್ವಜನಿಕರು, ಜನಜಾನುವಾರುಗಳಿಗೆ ಆಗುತ್ತಿರುವ ತೊಂದರೆ ತಪ್ಪಿಸಬೇಕೆಂದು ಅರಣ್ಯ ಇಲಾಖೆಗೆ ಸ್ವಾಮಿ ಒತ್ತಾಯಿಸಿದ್ದಾರೆ.

# ಗಂಗಾಪರಮೇಶ್ವರಿ ಮೆರವಣಿಗೆ, ತೆಪ್ಪೋತ್ಸವ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕು ಗಂಗಾ ಮತಸ್ಥರ ಸಮಾಜದಿಂದ ಗಂಗಾ ಜಯಂತಿಯನ್ನು ಗುರುವಾರದಂದು ಪಟ್ಟಣದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು.



ಗಂಗಾ ಜಯಂತಿ ಆಚರಣೆ ಸಲುವಾಗಿ ಪಟ್ಟಣದ ಕೋಟೆ ಬಡಾವಣೆಯಲ್ಲಿನ ರಾಘವೇಂದ್ರ ಮಠದ ಪಕ್ಕದ ಕಲ್ಯಾಣಿಗೆ ಪೂಜೆ ನೆರವೇರಿಸಿ ಕಲ್ಯಾಣಿಯಲ್ಲಿನ ಗಂಗೆಯನ್ನು ಕಳಶದಲ್ಲಿ ತುಂಬಿ ಮಕ್ಕಳಿಂದ ಕಳಶ ಹೊರಿಸಿ, ಪೂಜೆ ಸಲ್ಲಿಸಿ ನೂರಾರು ಮಂದಿ ಮುತ್ತೈದೆಯರು, ಮಕ್ಕಳು, ಸಮಾಜದ ಭಾಂಧವರು ಮೆರವಣಿಗೆಯಲ್ಲಿ ಭಾಗಿಯಾದರು. ಗ್ರಾಮ ದೇವತೆ ಗಂಗಾಪರಮೇಶ್ವರಿ ದೇವಿಯನ್ನು ದೇವಿಯನ್ನು ಆಲಂಕೃತ ವಾಹನದಲ್ಲಿರಿಸಿ ನಡೆಸಲಾದ ಮೆರವಣಿಗೆಯಲ್ಲಿ ವೀರಗಾಸೆ ಕುಣಿತ ಸೇರಿ ವಿವಿಧ ಕಲಾತಂಡಗಳು ಭಾಗಿಯಾಗಿದ್ದವು.

ನಂತರ ಪಟ್ಟಣದ ಅಮಾನಿಕೆರೆಯಲ್ಲಿ ಗಂಗಾಪರಮೇಶ್ವರಿ ದೇವಿಯ ತೆಪ್ಪೋತ್ಸವವನ್ನು ಅದ್ದೂರಿಯಿಂದ ನಡೆಸಲಾಯಿತು. ನೆರೆದಿದ್ದ ಭಕ್ತರಿಗೆ ಅನ್ನಸಂತರ್ಪಣೆಯೂ ನಡೆಯಿತು.

ಗಂಗಾಮತಸ್ಥರ ಸಂಘದ ತಾಲ್ಲೂಕು ಅಧ್ಯಕ್ಷ ಸಿ.ಜಿ.ಕುಮಾರ್, ಉಪಾಧ್ಯಕ್ಷ ಬೋರಪ್ಪ, ಪ್ರಧಾನ ಕಾರ್ಯದರ್ಶಿ ವೆಂಕಟೇಶ್, ಕಾರ್ಯದರ್ಶಿ ಪಿಎಲ್‌ಡಿ ರಾಜು, ಮುಖಂಡರಾದ ಶೇಖರ್, ಮನು, ಯಜಮಾನ ವೆಂಕಟೇಶ್, ಧರ್ಮ, ನಂದೀಶ್, ಮಂಜಣ್ಣ, ಶಿವಶಂಕರ್, ಸ್ವಾಮಿ, ಅಣ್ಣಯಣ್ಣ, ಸುರೇಶ್, ಪುರಸಭಾ ಮಾಜಿ ಅಧ್ಯಕ್ಷ ಸಿ.ಟಿ.ಅಶೋಕ್ ಕುಮಾರ್ ಸೇರಿ ನೂರಾರು ಮಹಿಳೆಯರು ಭಾಗವಹಿಸಿದ್ದರು.

# ಪಾರದರ್ಶಕತೆಯಿಂದ ಕೆಲಸ ಮಾಡಿದರೆ ಉತ್ತಮ ಆಡಳಿತ ಸಾಧ್ಯ

## ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅಭಿಮತ

• ಪ್ರಜೋದಯ ವರದಿ

**ಹಾಸನ:** ಸ್ಥಳೀಯ ಆಡಳಿತದಲ್ಲಿ ಗ್ರಾಮ ಪಂಚಾಯಿತಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸಮನ್ವಯತೆ ಮತ್ತು ಪಾರದರ್ಶಕತೆಯಿಂದ ಕೆಲಸ ಮಾಡಿದರೆ ಉತ್ತಮ ಆಡಳಿತ ಸಾಧ್ಯ. ಮಹಿಳಾ ಮೀಸಲಾತಿ, ಮಹಿಳಾ ಆರ್ಥಿಕ ಸಬಲೀಕರಣ ಇವುಗಳನ್ನು ನಾವು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಾತ್ರ ಕಾಣಬಹುದು ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಪ್ರಭಾರ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಸ್.ಲತಾಕುಮಾರಿ ತಿಳಿಸಿದ್ದಾರೆ.



ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಶುಕ್ರವಾರ ನಡೆದ ಪಂಚಾಯತ್ ರಾಜ್ ದಿನಾಚರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅವರು, 1993ರಲ್ಲಿ 73 ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಮೂಲಕ ಪಂಚಾಯತ್ ರಾಜ್ ವ್ಯವಸ್ಥೆಗೆ ಸಂವಿಧಾನಿಕ ಮಾನ್ಯತೆ ನೀಡಲಾಯಿತು ಎಂದರು.

ಗ್ರಾಮಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಪಂಚಾಯತ್ ಗಳ ಪಾತ್ರ ಮಹತ್ವವಾಗಿದೆ. ಸ್ಥಳೀಯ ಸಂಸ್ಥೆಗಳಿಗೆ ನಡೆಯುವ ಚುನಾವಣೆಗಳಲ್ಲಿ ಮಹಿಳೆಯರಿಗೆ ಶೇಕಡಾ 50 ಕ್ಕಿಂತಲೂ ಹೆಚ್ಚಿನ ಮೀಸಲಾತಿಯನ್ನು ನೀಡಲಾಗಿದ್ದು, ಹೆಚ್ಚು ಮಹಿಳಾ ಸದಸ್ಯರೇ ಆಯ್ಕೆಯಾಗುತ್ತಾರೆ ಎಂದು ತಿಳಿಸಿದರು.

ಮಹಿಳಾ ಮೀಸಲಾತಿ, ಮಹಿಳಾ ಆರ್ಥಿಕ ಸಬಲೀಕರಣ ಇವುಗಳನ್ನು ನಾವು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕಾಣಬಹುದು ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ 2025-26 ನೇ ಸಾಲಿನಲ್ಲಿ ಆಸ್ತಿ ತೆರಿಗೆ ಸಂಗ್ರಹಣೆಯಲ್ಲಿ ಉತ್ತಮ ಸಾಧನೆ ಮಾಡಿದ ಅರಸೀಕೆರೆ ತಾಲ್ಲೂಕು ಜಾವಗಲ್ ಗ್ರಾಮ ಪಂಚಾಯಿತಿ, ಹಾಸನ ತಾಲ್ಲೂಕು ಕೌಶಿಕ ಗ್ರಾಮ ಪಂಚಾಯಿತಿ ಹಾಗೂ ಚನ್ನರಾಯಪಟ್ಟಣ ತಾಲ್ಲೂಕು ಹಿರಿಸಾವೆ ಗ್ರಾಮ ಪಂಚಾಯಿತಿಗಳ ಅಧಿಕಾರಿಗಳನ್ನು ಗೌರವಿಸಲಾಯಿತು.

ಗ್ರಾಮ ಪಂಚಾಯಿತಿ ಅರಿವು ಕೇಂದ್ರವನ್ನು ಉತ್ತಮವಾಗಿ ಅಭಿವೃದ್ಧಿಪಡಿಸಿದ ಹಾಸನ ತಾಲ್ಲೂಕು ಹೂವಿನಹಳ್ಳಿ ಕಾವಲ್ ಗ್ರಾಮ ಪಂಚಾಯಿತಿ, ಉತ್ತಮ ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿಯಾಗಿ ಅಭಿವೃದ್ಧಿಪಡಿಸಿದ ಆಲೂರು ತಾಲ್ಲೂಕು ಪಾಳ್ಯ ಗ್ರಾಮ ಪಂಚಾಯಿತಿಗಳ ಅಧಿಕಾರಿಗಳನ್ನು ಗೌರವಿಸಲಾಯಿತು.

2022-23 ನೇ ಸಾಲಿನ ರಾಷ್ಟ್ರೀಯ ಪಂಚಾಯತ್ ರಾಜ್ ಪುರಸ್ಕಾರವನ್ನು ಪಡೆದ ಸಕಲೇಶಪುರ ತಾಲ್ಲೂಕು ಬಿರಡಹಳ್ಳಿ ಗ್ರಾಮ ಪಂಚಾಯಿತಿಯ ಅಧಿಕಾರಿಗಳನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಬಾಬು, ಮುಖ್ಯ ಯೋಜನಾಧಿಕಾರಿ, ಕೃಷ್ಣಮೂರ್ತಿ ಹಾಗೂ ಸಿಬ್ಬಂದಿಗಳು ಹಾಗೂ ಮಹಿಳಾ ಒಕ್ಕೂಟದ ಸದಸ್ಯರುಗಳು ಭಾಗವಹಿಸಿದ್ದರು.

## ಎಸ್‌ಸಿ-ಎಸ್‌ಟಿ ಸಮುದಾಯ ಉದ್ಯಮಪತಿಗಳಾಗಿ ಯಶಸ್ವಿಯಾಗಿ ಗೆಲುವು ಸಾಧಿಸಬೇಕು

# ಉದ್ಯಮಶೀಲತಾ ಯೋಜನೆಗಳ ಸಮರ್ಥವಾಗಿ ಬಳಸಿಕೊಳ್ಳಿ

• ಪ್ರಜೋದಯ ವರದಿ

**ಹಾಸನ:** ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಆನೇಕ ಉದ್ಯಮಶೀಲತಾ ಯೋಜನೆಗಳಿದ್ದು ಅವುಗಳನ್ನು ಸಮರ್ಥವಾಗಿ ಬಳಸಿಕೊಂಡು ಎಸ್‌ಸಿ-ಎಸ್‌ಟಿ ಸಮುದಾಯ ಉದ್ಯಮಪತಿಗಳಾಗಿ ಮುಂದುವರೆದು ಯಶಸ್ವಿಯಾಗಿ ಗೆಲುವು ಸಾಧಿಸಬೇಕು ಎಂದು ಡಿಐಸಿಸಿಐ ಕರ್ನಾಟಕ ಚಾಪ್ಟರ್ ಅಧ್ಯಕ್ಷ ನರಸಿಂಹ ಮೂರ್ತಿ ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಡಿಐಸಿಸಿಐ ಹಾಗೂ ನ್ಯಾಷನಲ್ ಎಸ್ಸಿ, ಎಸ್ಟಿ ಹಬ್ ವತಿಯಿಂದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವಾಲಯದ ಸಹಯೋಗದಿಂದ ಆಯೋಜಿಸಿದ್ದ ಉದ್ಯಮ ಅಭಿವೃದ್ಧಿ ಕುರಿತ ವಿಶೇಷ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಎಸ್‌ಸಿ-ಎಸ್‌ಟಿ ಉದ್ಯಮಿಗಳಿಗೆ ಕೈಗಾರಿಕೆ ಪ್ರಾರಂಭಿಸಲು ಎಲ್ಲಾ ರೀತಿಯ ಸಹಕಾರ ನೀಡಲು ಯೋಜನೆಗಳಿದ್ದು, ದಲಿತ ಇಂಡಸ್ಟ್ರಿಯಲ್ ಚೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರಿಯು ಸಹ ಸಹಕಾರ ಹಾಗೂ ಸಲಹೆಗಳನ್ನು ನೀಡಲು ಸಿದ್ದವಿದೆ ಎಂದರು.



ಕೈಗಾರಿಕಾ ಪ್ರದೇಶಗಳಲ್ಲಿ ನಿವೇಶನಗಳು ಸೇರಿದಂತೆ ಉದ್ಯಮಿಗಳಾಗಲು ಕೌಶಲ್ಯ ತರಬೇತಿ ಮತ್ತು ಉದ್ಯಮಕ್ಕೆ ಮೂಲ ಸೌಕರ್ಯ ಕೊಡಲು ಸಿದ್ಧವಿದೆ. ಬಂಡವಾಳ ಇಲ್ಲದೆ ಉದ್ಯಮವೇ ಇಲ್ಲ. ಉದ್ಯಮಗಳಿಗೆ ಬಹುತೇಕ ತೊಂದರೆಯೆಂದರೆ ಹಣಕಾಸು ವ್ಯವಸ್ಥೆ ಮತ್ತು ಬಂಡವಾಳ. ಇದಕ್ಕೆ ಬ್ಯಾಂಕ್‌ಗಳು ಹಾಗೂ ಕೆ.ಎಸ್.ಎಫ್.ಸಿ ಯಂತಹ ಹಣಕಾಸು ಸಂಸ್ಥೆಗಳು ಹಣ ನೀಡಲು ಸಿದ್ಧರಿದ್ದಾರೆ. ಬ್ಯಾಂಕಿನವರಿಂದ ಯಾವುದಾದರೂ ಸಮಸ್ಯೆ ಉಂಟಾದರೆ ಡಿಐಸಿಸಿಐಯನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು.

ದಲಿತ ವಾಣಿಜ್ಯ ಮತ್ತು ಕೈಗಾರಿಕೋದ್ಯಮಿಗಳ ಸಂಘದ (ಡಿಐಸಿಸಿಐ), ದಲಿತರಲ್ಲಿ 2005ರಲ್ಲಿ ಉದ್ಯಮಶೀಲತೆಯೇ ಇರಲಿಲ್ಲ. ದಲಿತರೆಂದರೆ ಕೇವಲ ಉದ್ಯೋಗಗಳನ್ನು ಹುಡುಕುವವರು ಎಂದು ಕರೆಯುತ್ತಿದ್ದರು. ಆದರೆ ನಾವು ಉದ್ಯೋಗ ನೀಡುವವರಾಗಬೇಕು ಎನ್ನುವುದು ಸಂಸ್ಥೆಯ ಆಶಯ ಎಂದರು.

ಕೆ.ಎಸ್.ಎಫ್.ಸಿ. ವ್ಯವಸ್ಥಾಪಕ ರವೀಂದ್ರನಾಥ ಮಾತನಾಡಿ, ದಲಿತ ಸಮುದಾಯದ ಉದ್ಯಮಿಗಳಿಗೆ ಪ್ರತ್ಯೇಕವಾದ ಯೋಜನೆ ರೂಪಿಸಲಾಗಿದ್ದು 10 ಕೋಟಿ ವರೆಗೂ ಸಬ್ಸಿಡಿ ಅಡಿಯಲ್ಲಿ 10 ವರ್ಷಗಳ ಕಾಲಾವಾಡಿ ನೀಡಿ ಸಾಲ ನೀಡಲಾಗುತ್ತದೆ. ಬಡ್ಡಿಯಲ್ಲಿಯೂ ಸಹ ಈ ಯೋಜನೆಯಲ್ಲಿ ರಿಯಾಯಿತಿ ಪಡೆಯಬಹುದು. ಇದಲ್ಲದೆ ಎಸ್ಸಿ ಎಸ್ಟಿ ಸಮುದಾಯದ ಉದ್ಯಮಿಗಳಿಗೆ ಯಾವ ಹೊಸ ಉದ್ಯಮವನ್ನಾದರೂ ಮಾಡಲು ಅವಕಾಶ ನೀಡಲಾಗಿದೆ. ಅದಲ್ಲದೆ ಕ್ವಾಲಟರಲ್ ಸೆಕ್ಯೂರಿಟಿ ನೀಡಲು ಸರಕಾರವು ಶೇಕಡಾ 100ರಷ್ಟು ಸೆಕ್ಯೂರಿಟಿ ನೀಡಲು ಸಹ ಯೋಜನೆಗಳಿವೆ. ಈ ಎಲ್ಲ ಯೋಜನೆಗಳ ಸದುಪಯೋಗವನ್ನು ಎಸ್ಸಿ ಎಸ್ಟಿ ಸಮುದಾಯದ ಯುವಕರು ಉಪಯೋಗಿಸಿಕೊಳ್ಳಬೇಕು ಎಂದರು.

ವಕೀಲ ಗಂಗಾಧರ್ ಬಹುಜನ ಮಾತನಾಡಿ, ಭಾರತದಲ್ಲಿ ಶೇ.33ರಷ್ಟು ಜನರು ಭೂಮಿ ರಹಿತರಿದ್ದು, ಅದರಲ್ಲಿ ಬಹುಪಾಲು ಜನರು ಎಸ್ಸಿ ಎಸ್ಟಿ ಸಮುದಾಯಕ್ಕೆ ಸೇರಿದವರೇ ಆಗಿರುತ್ತಾರೆ. ಇತ್ತೀಚಿನ ದಿನಗಳಲ್ಲಿ ಕೆಲವೇ ಕೆಲವು ಮಂದಿ ಸಣ್ಣ ಸಣ್ಣ ಉದ್ಯಮಗಳನ್ನು ಪ್ರಾರಂಭ ಮಾಡುವ ಕೆಲಸ ಮಾಡುವ ಮೂಲಕ ಉದ್ದಿಮೆದಾರರಾಗುತ್ತಿದ್ದಾರೆ. ಎಂದು ಹರ್ಷ ವ್ಯಕ್ತಪಡಿಸಿದರು.

ಭಾರತ ಆಹಾರ ನಿಗಮದ ವ್ಯವಸ್ಥಾಪಕರಾದ ರಘುನಂದನ್, ಜೆಮ್ ಸಂಸ್ಥೆಯ ಗೀತಾ, ಎನ್.ಎಸ್.ಎಸ್. ಹೆಚ್.ಒ ಡಾ.ಸುರೇಶ್, ಎಸ್ಸಿ ಎಸ್ಟಿ ಹಬ್‌ನ ಸುಜಾತ, ಡಿಐಸಿಸಿಐನ ಲೀಗಲ್ ಅಡ್ವೈಸರ್ ಮೂರ್ತಿ, ಡಿಐಸಿಸಿಐನ ಮಂಜುನಾಥ್ ಕಬ್ಬೂರು, ಶ್ರೀಕಾಂತ್, ಕೆ.ಎಸ್.ಎಫ್.ಸಿ ಸಹಾಯಕ ವ್ಯವಸ್ಥಾಪಕ ಯೋಗಾನಂದ, ಕೃಷ್ಣಕುಮಾರ್ ಇನ್ನಿತರರಿದ್ದರು.

# ಶಿಕ್ಷಕರ ಪರಿಶ್ರಮದಿಂದ ಉತ್ತಮ ಫಲಿತಾಂಶ

## ಉಪ ಪ್ರಾಂಶುಪಾಲರಾಗಿ ಅಧಿಕಾರ ಸ್ವೀಕರಿಸಿದ ಪ್ರದೀಪ್‌ಕುಮಾರ್

• ಪ್ರಜೋದಯ ವರದಿ

**ಹಳೇಬೀಡು:** ಅತಿ ಹೆಚ್ಚು ಮಕ್ಕಳಿರುವ ಹಳೇಬೀಡಿನ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಂದಿರುವುದು ಸಂತಸದ ವಿಚಾರ ಎಂದು ಉಪ ಪ್ರಾಂಶುಪಾಲ ಪ್ರದೀಪ್‌ಕುಮಾರ್ ಹೇಳಿದರು.



ಪಟ್ಟಣದ ಕರ್ನಾಟಕ ಪಬ್ಲಿಕ್ ಶಾಲೆಯ ಉಪ ಪ್ರಾಂಶುಪಾಲರಾಗಿ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ಮಾತನಾಡಿದ ಅವರು, 350 ಮಕ್ಕಳಿರುವ ಹಳೇಬೀಡು ಕೆಪಿಎಸ್ ಶಾಲೆಯಲ್ಲಿ ಶಿಕ್ಷಕರು ಪರಿಶ್ರಮದಿಂದ ಕೆಲಸ ಮಾಡಿದ್ದರಿಂದ ಶೇ.90ರಷ್ಟು ಫಲಿತಾಂಶ ಬಂದಿದೆ. ಆಸಕ್ತಿಯ ಶಿಕ್ಷಕರು ಕೆಲಸ ಮಾಡುತ್ತಿರುವ ಶಾಲೆಯ ಉಪಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುವ ಅವಕಾಶ ದೊರಕಿರುವುದು ಸುದೈವ ಅವರು ಹೇಳಿದರು.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎಸ್.ಸಿ.ವಿರೂಪಾಕ್ಷ ಅವರು ಮಾತನಾಡಿ, ಕೆಪಿಎಸ್ ಶಾಲೆಯಲ್ಲಿ ನಡೆಯುವ ಸಾಮೂಹಿಕ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪ್ರತಿ ವರ್ಷ ಗ್ರಾಮ ಪಂಚಾಯಿತಿಯಿಂದ ಉಪಹಾರ ಹಾಗೂ ಸಿಹಿ ವಿತರಣೆ ಮಾಡಲಾಗುತ್ತಿದೆ. ಗ್ರಾಮ ಪಂಚಾಯಿತಿಯ ಶೈಕ್ಷಣಿಕ ಅನುದಾನವನ್ನು ಎಲ್ಲ ಶಾಲೆಗಳಿಗೂ ಆದ್ಯತೆಗೆ ಅನುಗುಣವಾಗಿ ನೀಡುತ್ತೇವೆ ಎಂದರು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಬಿ.ಎಸ್.ಸೋಮಶೇಖರ್ ಅವರಿ ಮಾತನಾಡಿ, ಕೆಪಿಎಸ್ ಶಾಲೆಯ ಕಾಂಪೌಂಡ್ ನಿರ್ಮಾಣಕ್ಕೆ ಶಾಸಕ ಎಚ್.ಕೆ.ಸುರೇಶ್ ಪ್ರಸ್ತಾವನೆ ಸಲ್ಲಿಸಿದ್ದಾರೆ. ಹಣ ಬಿಡುಗಡೆಯಾದ ತಕ್ಷಣ ಕಾಮಗಾರಿ ಆರಂಭಿಸಲಾಗುವುದು ಎಂದರು.

ನಿವೃತ್ತ ಶಿಕ್ಷಣಾಧಿಕಾರಿ ಮುಳ್ಳಯ್ಯ ಮಾತನಾಡಿದರು. ಪ್ರಭಾರಿ ಉಪ ಪ್ರಾಂಶುಪಾಲ ಮೋಹನರಾಜು ಪ್ರದೀಪ್ ಕುಮಾರ್ ಅವರಿಗೆ ಅಧಿಕಾರ ಹಸ್ತಾಂತರಿಸಿದರು.

ಶಿಕ್ಷಕರಾದ ದಾಕ್ಷಾಯಿಣಿ, ಶಿವನಂಜೇಗೌಡ , ಪ್ರಸನ್ನ ಕುಮಾರ್, ಮನೋಜ್ ಕುಮಾರ್, ಮಹೇಶ್, ನಳಿನಿ ಇನ್ನಿತರರು ಹಾಜರಿದ್ದರು.

# ಜಿಲ್ಲೆಯ 261 ಗ್ರಾಮ ಪಂಚಾಯಿತಿಗೆ 3,541 ಸ್ಥಾನ ನಿಗದಿ

» ಮೊದಲನೇ ಪುಟದಿಂದ

ಮಲ್ಲಿಪಟ್ಟಣ-12, ಹೊಳಲಗೋಡು-11,ದೊಡ್ಡಬೆಮ್ಮತ್ತಿ-14, ಹುಲಿಕಲ್ -11, ದೊಡ್ಡಮಗ್ಗೆ-13, ಸಂತೆಮರೂರು-18, ಯಲಗತವಳ್ಳಿ-16, ಬೆಳವಾಡಿ -19, ಅಗ್ರಹಾರ-10, ಚಿಕ್ಕಹಳ್ಳಿ-21, ಕೊಣನೂರು-21, ಹಂಡ್ರಂಗಿ-13, ಬನ್ನೂರು-11, ಸರಗೂರು-12, ಕಟ್ಟೆಪುರ-15, ರಾಮನಾಥಪುರ-20, ಬಸವ ಪಟ್ಟಣ-15,ಕಾಳೇನಹಳ್ಳಿ-17,ಕೇರಳಾಪುರ-16,ರುದ್ರಪಟ್ಟಣ-13, ಲಕ್ಕೂರು -13, ಆಲದಹಳ್ಳಿ-9, ಹನ್ಯಾಳು-12, ಕಡವಿನಹೊಸಹಳ್ಳಿ-11, ತರಿಗಳಲೆ-10, ಮೋಕಲಿ-11,ಕೊರಟಿಕೆರೆ-11,ಹೆಗ್ಗಡಿಹಳ್ಳಿ-9ಸ್ಥಾನನಿಗದಿ ಮಾಡಲಾಗಿದೆ.

ಅರಸೀಕೆರೆ ತಾಲ್ಲೂಕಿನ ಹಾರನಹಳ್ಳಿ-15, ಜಾವಗಲ್-23, ಬಂದೂರು -13, ಅಗ್ಗುಂಡ-15, ಕೋಳಗುಂದ-18, ಮುರುಂಡಿ-12, ಹಬ್ಬನಘಟ್ಟ -16, ರಂಗಾಪುರ-16, ಬೆಳಗುಂಬ-20, ಬೆಂಡೇಕೆರೆ-14, ಲಾಳನಕೆರೆ-15, ಕುರುವಂಕ-15, ಕೆಂಕೆರೆ-14, ಬಾಗೇಶಪುರ-12, ಜೆಸಿಪುರ-14, ಶಂಕರನಹಳ್ಳಿ -15, ಹಿರಿಯೂರು-15, ಹೆಗ್ಗಟ್ಟ-12, ಗೀಜಿಹಳ್ಳಿ-11, ಕಲ್ಲುಂಡಿ-17, ಶ್ಯಾನೇಗೆರೆ-22, ಕಾಮಸಮುದ್ರ-14, ಕರಗುಂದ-15, ಯಡುವನಹಳ್ಳಿ-11, ದುಮ್ಮೇನಹಳ್ಳಿ-23, ಕಣಕಟ್ಟೆ-14, ಮಾಡಾಳು-11, ಪುರಲೇಹಳ್ಳಿ-19, ನರಸೀಪುರ-12, ಕಾಚಿಘಟ್ಟ -11, ಹಂದ್ರಾಳು-12, ನೇರ್ಲಗೆ-14, ತಳಲೂರು-22, ಕಲ್ಯಾಡಿ-9, ಚಗಚಗೆರೆ -15, ಗಂಡಸಿ-12, ದೊಡ್ಡಮೇಟಿಕುರ್ಕೆ-14, ರಾಂಪುರ-12, ಜಾಜುರು-17, ಅರಕೆರೆ-13, ಬಾಗೀವಾಳು-10, ಮುದುಡಿ 13, ಕೊಂಡೇನಾಳು-11, ಉಂಡಿಗ ನಾಳು-11 ಸ್ಥಾನಗಳಿವೆ.

ಬೇಲೂರು ತಾಲ್ಲೂಕಿನ ಬಂಟೇನಹಳ್ಳಿ 15, ಹಳೇಬೀಡು 20, ಕೋಗಿಲೆ ಮನೆ-8, ಆಂದಲೆ-7, ಚಟಚಟನಹಳ್ಳಿ-8, ಯಲಹಂಕ 12, ರಾಜನಶಿರಿಯೂರು-18, ಘಟ್ಟದಹಳ್ಳಿ-17, ಗಂಗೂರು-9, ಕೋಡಿಹಳ್ಳಿ-12, ಅರೇಹಳ್ಳಿ -22, ಲಕ್ಕುಂದ-10, ದಬ್ಬೆ-6, ಯಮಸಂಧಿ-6, ಹನುಗನಹಳ್ಳಿ-9, ಚೀಕನ ಹಳ್ಳಿ-7, ಸನ್ಯಾಸಿಹಳ್ಳಿ-10, ಇಬ್ಬೀಡು-14, ಕುಶಾವರ-9, ಗೋಣಿ ಸೋಮನ ಹಳ್ಳಿ-12, ಹೆಬ್ಬಾಳು-14, ಮದಘಟ್ಟ-9, ಬಿಕ್ಕೋಡು-12, ಮಲ ಸಾವರ-7, ಅನುಘಟ್ಟ-7, ತುಂಬದೇವನಹಳ್ಳಿ-7, ಹಗರೆ-20, ಹುಲುಗುಂಡಿ-9, ಚಿಕ್ಕ ಮೇದೂರು-13, ಕೆಸಗೋಡು-7, ಹನಿಕೆ-10, ಸವಾಸಿಹಳ್ಳಿ -13, ಅಡಗೂರು -12, ನಾರಾಯಣಪುರ-17, ನಾರ್ವೆಪೇಟೆ-8, ಕಳ್ಳೇರಿ-13 ಸ್ಥಾನಗಳನ್ನು ನಿಗದಿ ಪಡಿಸಲಾಗಿದೆ.

ಚನ್ನರಾಯಪಟ್ಟಣ ತಾಲ್ಲೂಕಿನ ಜುಟ್ಟನಹಳ್ಳಿ-20, ನವಿಲೆ-12, ನುಗ್ಗೇಹಳ್ಳಿ -18, ಅಣತಿ-14, ಕೆಂಬಾಳು-15, ಹಿರೀಸಾವೆ-23, ಬಾಗೂರು -16, ಬಳದರೆ-18, ಜಿನ್ನೇನಹಳ್ಳಿ-14, ಮತಿಘಟ್ಟ-14, ಜಂಬೂರು-15, ಮಟ್ಟನವಿಲೆ-16, ತಗಡೂರು-14, ಅನೇಕೆರೆ-19, ನಲ್ಲೂರು-16, ದಿಂಡಗೂರು -15, ಸಂತೇಶಿವರ-15, ಬರಗೂರು-17, ಗುಲಸಿಂದ-16, ದಮ್ಮನಿಗಲ-13, ಬೆಕ್ಕ-14, ಬಾಳಗಂಚಿ-10, ಅಕ್ಕನಹಳ್ಳಿ-16, ಕುಂದೂರು -15, ಜನಿವಾರ -12, ಡಿ.ಕಾಳೇನಹಳ್ಳಿ-13, ಕಾಂತರಾಜಪುರ-18, ದಿಡಿಗ-21, ನೊರನಕ್ಕಿ -16, ಗೌಡಗೆರೆ -19, ಕಲ್ಕೆರೆ-19, ಕುಂಬೇನಹಳ್ಳಿ-13, ಸಂತೇನಹಳ್ಳಿ-15, ಸುಂಡಹಳ್ಳಿ-14, ಕಬ್ಬಳ್ಳಿ-14, ಬ್ಯಾಡರಹಳ್ಳಿ-15,ಎಂ.ಶಿವರ-14, ಕಾರೇಹಳ್ಳಿ -11, ಬೆಳಗಿಹಳ್ಳಿ-12, ಶ್ರವಣಬೆಳಗೊಳ-17, ಕಬ್ಬಾಳು ಗ್ರಾಮ ಪಂಚಾಯಿತಿಗಳಿಗೆ 8 ಸ್ಥಾನಗಳಿವೆ.

ಹಾಸನ ತಾಲ್ಲೂಕಿನ ಅಟ್ಟಾವರ ಹೊಸಹಳ್ಳಿ-16, ಅಂಬುಗ 8, ಅಂಕಪುರ 14, ಬಸವಾಘಟ್ಟ-12, ಬೈಲಹಳ್ಳಿ-13, ಚನ್ನಂಗಿಹಳ್ಳಿ-13, ದೊಡ್ಡ ಗೇಣಿ ಗೆರೆ-11, ದುದ್ದ-17, ಗೊರೂರು-10, ಹನುಮಂತಪುರ-15, ಹೆರಗು -13, ಹೊನ್ನಾವರ-13, ಹೂವಿನಹಳ್ಳಿ ಕಾವಲ್-14, ಜಾಗರವಳ್ಳಿ-11, ಕಬ್ಬಳ್ಳಿ -15, ಕಂದಲಿ-14, ಕಾರ್ಲೆ-17, ಕಟ್ಟಾಯ-15, ಕೋರವಂಗಲ-14, ಕೌಶಿಕ -17, ಕುದುರಗುಂಡಿ-13, ಮಡೇನೂರು-14, ಮರ್ಕುಲಿ-19, ಮಳ ಗೋಡು -11, ಮೊಸಳೆ ಹೊಸಹಳ್ಳಿ-17, ನಿಟ್ಟೂರು-11, ಸಾಲ ಗಾಮೆ-16, ಸೀಗೆ-18, ಶಂಕರನಹಳ್ಳಿ-11, ಶಾಂತಿಗ್ರಾಮ-19, ಶೆಟ್ಟಿಹಳ್ಳಿ -15, ಹಾಲುವಾಗಿಲು-8, ತೇಜೂರು-12, ಉಗನೆ-17, ಯಲಗುಂದ-13, ಗಾಡೇನಹಳ್ಳಿ-10 ಸ್ಥಾನಗಳಿವೆ.

ಹೊಳೆನರಸೀಪುರ ತಾಲ್ಲೂಕಿನ ಮಳಲಿ-14, ದೊಡ್ಡಕುಂಚೆ-15, ಹರಿಹರಪುರ-11, ಹಳೆಕೋಟೆ-8, ಹಂಗರಹಳ್ಳಿ-10, ಕಟ್ಟೆಬೆಳಗುಲಿ-14, ಬಾಗೀವಾಳು-19, ಕೋಡಿಹಳ್ಳಿ-17, ಮೂಡಲಹಿಪ್ಪೆ-21, ಮಲ್ಲಪ್ಪನಹಳ್ಳಿ -16, ಐಚನಹಳ್ಳಿ-19, ಸಂಕನಹಳ್ಳಿ-10, ಪಡವಲಹಿಪ್ಪೆ-13, ದೊಡ್ಡ ಬ್ಯಾಗತವಳ್ಳಿ-11, ಕೆರಗೋಡು-15, ತಾತನಹಳ್ಳಿ-14, ದೊಡ್ಡ ಕಾಡನೂರು -23, ಶ್ರವಣೂರು-21, ದೊಡ್ಡಹಳ್ಳಿ-12, ನಗರನಹಳ್ಳಿ-17, ಅನೆಕನ್ನಂಬಾಡಿ-12, ಹಳ್ಳಿಮೈಸೂರು-16, ಕ್ಯಾತನಹಳ್ಳಿ-16, ನಿಡುವಣೆ-17, ಬಿದರಕ್ಕ-18, ಓಡನಹಳ್ಳಿ-13 ಸ್ಥಾನಗಳನ್ನು ನಿಗದಿ ಮಾಡಲಾಗಿದೆ.

ಸಕಲೇಶಪುರ ತಾಲ್ಲೂಕಿನ ಮಳಲಿ-14, ಹೆಬ್ಬಸಾಲೆ-14, ಬ್ಯಾಕರವಳ್ಳಿ-12, ಹಲಸುಲಿಗೆ-9, ಬಿರಡಹಳ್ಳಿ-11, ಕ್ಯಾನಹಳ್ಳಿ-7, ಆನೆಮಹಲ್-10, ಯಸಳೂರು-10, ಹೊಸೂರು-12, ಚಂಗಡಿಹಳ್ಳಿ-9, ಐಗೂರು-8, ಹೆತ್ತೂರು-10, ಹೊಂಗಡಹಳ್ಳ-6, ವಳಲಹಳ್ಳಿ-8, ಕುರುಭತ್ತೂರು-11, ಉದೇವಾರ-8, ಬಾಳ್ಳು-16, ಬಾಗೆ-12, ಕುಣಿಗನಹಳ್ಳಿ-11, ಹಾನುಬಾಳು-13, ಕ್ಯಾಮನಹಳಿ -13, ಹೆಗ್ಗದ್ದೆ-10, ದೇವಾಲದಕೆರೆ-8, ಬೆಳಗೋಡು-14, ವಣಗೂರು-9, ಉಚ್ಚಂಗಿ ಗ್ರಾಮ ಪಂಚಾಯಿತಿಗೆ 10 ಸ್ಥಾನಗಳನ್ನು ನಿಗದಿ ಮಾಡಲಾಗಿದೆ.

# ಕಟ್ಟಡಗಳ ಎತ್ತರ:ನಿರ್ಬಂಧ ತೆರವಿಗೆ ಮನವಿ

• ಪ್ರಜೋದಯ ವರದಿ

**ನವದೆಹಲಿ:** ಬೆಂಗಳೂರಿನ ವಿಮಾನ ನಿಲ್ದಾಣಗಳ ಸುತ್ತ ಮುತ್ತಲ ಪ್ರದೇಶದಲ್ಲಿ ರಕ್ಷಣಾ ಇಲಾಖೆ ವಿಧಿಸಿರುವ ಕಟ್ಟಡಗಳ ಎತ್ತರದ ನಿರ್ಬಂಧಗಳು ಪ್ರಗತಿಗೆ ಅಡ್ಡಿಯಾಗಿದ್ದು, ಈ ನಿರ್ಬಂಧಗಳನ್ನು ಸಡಿಲಗೊಳಿಸಬೇಕೆಂದು ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಮನವಿ ಮಾಡಿದರು.



ನವದೆಹಲಿಯಲ್ಲಿ ಕೇಂದ್ರ ಸಚಿವರನ್ನು ಶುಕ್ರವಾರ ಭೇಟಿ ಮಾಡಿದ ಶಿವಕುಮಾರ್ ಮನವಿ ಪತ್ರ ಸಲ್ಲಿಸಿದರು. ವಿಮಾನ ನಿಲ್ದಾಣಗಳ 20 ಕಿ.ಮೀ. ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಚಟುವಟಿಕೆಗಳಿಗೆ ನಿರಾಕ್ಷೇಪಣಾ ಪತ್ರ ನೀಡುವಾಗ ವಿಮಾನ ನಿಲ್ದಾಣದ ಅಧಿಕಾರಿಗಳು ವಿಪರೀತ ನಿರ್ಬಂಧಗಳನ್ನು ವಿಧಿಸುತ್ತಿದ್ದಾರೆ. ಬೆಂಗಳೂರು ವಿಶ್ವದ ವೇಗವಾಗಿ ಬೆಳೆಯುತ್ತಿರುವ ನಗರ ಗಳಲ್ಲಿ ಒಂದಾಗಿದೆ. ಹೆಚ್‌ಎಎಲ್ ವಿಮಾನ ನಿಲ್ದಾಣ ಬೆಂಗಳೂರಿನ ಹೃದಯ ಭಾಗದಲ್ಲಿದ್ದು, ಅಭಿವೃದ್ಧಿ ಕಾಮಗಾರಿಗೆ ಹೆಚ್ಚಿನ ಬೇಡಿಕೆ ಇದೆ. ಆದರೆ, ಹೆಚ್ಚುವರಿಯಾಗಿ ವಿಧಿಸಲಾಗಿರುವ ನಿರ್ಬಂಧಗಳು ಈ ಪ್ರದೇಶಗಳಲ್ಲಿ ಅಭಿವೃದ್ಧಿಗೆ ಅಡ್ಡಿಯಾಗಿವೆ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಈ ವಿಚಾರವಾಗಿ ನಾಗರಿಕ ವಿಮಾನಯಾನ ಸಚಿವಾಲಯದ ಕಾರ್ಯದರ್ಶಿ ಹಾಗು ರಕ್ಷಣಾ ಕಾರ್ಯದರ್ಶಿಗಳಿಗೆ ಪತ್ರ ಬರೆಯಲಾಗಿದೆ. ವಿಮಾನ ಸುರಕ್ಷತೆ ಹಾಗು ನಗರದ ಅಭಿವೃದ್ಧಿ ಎರಡರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ನಡೆಸಿ, ಎದುರಾಗಿರುವ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು ಮನವಿ ಮಾಡಿದ್ದಾರೆ.

ಹೆಚ್‌ಎಎಲ್ ಹಾಗು ಯಲಹಂಕ ವಾಯುನೆಲೆಯ ಸುತ್ತ ಮುತ್ತಲ ಪ್ರದೇಶದಲ್ಲಿ ಕಟ್ಟಡ ನಿರ್ಮಾಣ ಮಾಡಲು ವಿಮಾನ ನಿಲ್ದಾಣ ಅಧಿಕಾರಿಗಳಿಂದ ನಿರಾಕ್ಷೇಪಣ ಪತ್ರ ಪಡೆಯ ಬೇಕಾಗಿದೆ. ವಿಮಾನ ನಿಲ್ದಾಣದ ಸುತ್ತಮುತ್ತಲ 15 ಕಿ.ಮೀ. ವ್ಯಾಪ್ತಿಯಲ್ಲಿ ಕಟ್ಟಡಗಳ ಎತ್ತರದ ಮಿತಿಯನ್ನು 150 ಮೀಟರ್‌ಗೆ ನಿಗದಿಪಡಿಸಲಾಗಿದೆಯೆಂದು ಜಿ.ಎಸ್.ಆರ್. 751 (ಇ) ನಿಯಮದಲ್ಲಿ ತಿಳಿಸಲಾಗಿದೆ. ಆದರೆ, ರಕ್ಷಣಾ ಇಲಾಖೆ ವಿಮಾನ ನಿಲ್ದಾಣಗಳು ಈ ವಿಪರೀತ ನಿರ್ಬಂಧ ಹೇರುವುದರ ಜೊತೆಗೆ 150 ಮೀ. ಎತ್ತರದ ಮಿತಿಯನ್ನು 15 ಕಿ.ಮೀ. ಮೀರಿ 20 ಕಿ.ಮೀ. ವರೆಗೂ ವಿಸ್ತರಿಸಿವೆ. ಈ ನಿರ್ಬಂಧಗಳು ಬೆಂಗಳೂರು ನಗರದ ಪ್ರಗತಿಗೆ ಮಾರಕವಾಗಿವೆ ಎಂದು ಗಮನ ಸೆಳೆದಿದ್ದಾರೆ.

ಸಿಂಗಪುರ, ಡಲ್ಲಾಸ್, ಲಂಡನ್ ಹಾಗು ದುಬೈ ಸೇರಿ ಅನೇಕ ನಗರಗಳಲ್ಲಿ ವಿಮಾನ ನಿಲ್ದಾಣಗಳನ್ನು ಕಚೇರಿ, ಮನರಂಜನೆ ಸೇರಿ ವಿವಿದೋದ್ದೇಶಗಳಿಗೆ ಬಳಸಲಾಗುತ್ತಿದೆ. ಈ ನಗರಗಳಲ್ಲಿ ವಿಮಾನ ನಿಲ್ದಾಣಗಳು ಸಂಚಾರ ಉದ್ದೇಶಕ್ಕೆ ಮಾತ್ರವಲ್ಲದೇ ಉದ್ಯೋಗದ ಕೇಂದ್ರವಾಗಿ ನಗರ ಪರಿವರ್ತನೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿವೆ. ಹೀಗಾಗಿ ಜಿ.ಎಸ್.ಆರ್ 751 (ಇ) ನಿಯಮ ಸಡಿಲಗೊಳಿಸಬೇಕು. 150 ಮೀ. ಎತ್ತರದ ಮಿತಿಯನ್ನು 15 ಕಿ.ಮೀ ವ್ಯಾಪ್ತಿಗೆ ಸೀಮಿತಗೊಳಿಸಬೇಕೆಂದು ಅವರು ಕೋರಿದ್ದಾರೆ.

ಬೆಂಗಳೂರು ವಿಶ್ವದ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿದೆ. ಹೆಚ್‌ಎಎಲ್ ವಿಮಾನ ನಿಲ್ದಾಣ ಬೆಂಗಳೂರಿನ ಹೃದಯ ಭಾಗದಲ್ಲಿದ್ದು, ಅಭಿವೃದ್ಧಿ ಕಾಮಗಾರಿಗಳಿಗೆ ಹೆಚ್ಚಿನ ಬೇಡಿಕೆ ಇದೆ. ಆದರೆ ಹೆಚ್ಚುವರಿಯಾಗಿ ವಿಧಿಸಲಾಗಿರುವ ನಿರ್ಬಂಧಗಳು ಈ ಪ್ರದೇಶಗಳಲ್ಲಿ ಅಭಿವೃದ್ಧಿಗೆ ಅಡ್ಡಿಯಾಗಿವೆ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

# ಕ್ಷೇತ್ರ ಅಭಿವೃದ್ಧಿಗೆ ಸರ್ಕಾರವಲ್ಲ ಇಚ್ಛಾಶಕ್ತಿ ಮುಖ್ಯ

» ಮೊದಲನೇ ಪುಟದಿಂದ

ಸಂಪರ್ಕ ಕಲ್ಪಿಸುವ ಕಾಮಗಾರಿಗೆ 2023 ರಲ್ಲಿಯೇ ಹಣ ಮಂಜೂರಾಗಿದೆ. ಅದ ರಿಂದ ಒಂದಲ್ಲ ಒಂದು ಮಾರ್ಗದಲ್ಲಿ ಹಳೇ ಬೀಡು, ಗಂಗೂರು ವಿದ್ಯುತ್ ಕೇಂದ್ರಕ್ಕೆ ನಿರಂತರವಾಗಿ ವಿದ್ಯುತ್ ಪೂರೈಕೆಯಾಗುತ್ತದೆ. ಶಾಸಕರಿಗೆ ಕಾಮಗಾರಿ ಮಾಡಿಸಲು ಆಗುತ್ತಿಲ್ಲ. ಕರೀಕಟ್ಟೆ ಹಳ್ಳಿ, ಮತಿಘಟ್ಟ ಭಾಗದ ಹಳ್ಳಿಗಳಲ್ಲಿ ವಿದ್ಯುತ್ ಸಮಸ್ಯೆಯಿಂದ ಬೇಸತ್ತಿದ್ದಾರೆ. ರೈತರು ಹಾಗೂ ಸೆಸ್ಕ್ ಸಿಬ್ಬಂದಿ ನಡುವೆ ಸಂಘರ್ಷ ಆಗುತ್ತಿದೆ. ಮತ್ತಿಘಟ್ಟ ನಾಗೇಗೌಡ ಹಾಗೂ ಸೆಸ್ಕ್ ಜೆಇ ನಡುವೆ ದೂರವಾಣಿ ಮುಖಾಂತರ ನಡೆದ ಸಂಘರ್ಷದಲ್ಲಿ ರೈತ ನಾಗೇಗೌಡ ಸಮರ್ಪಕ ವಿದ್ಯುತ್ ಪೂರೈಕೆ ಇಲ್ಲದೆ ಬೆಳೆ ಒಣಗುತ್ತಿದೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದಿದ್ದಾರೆ. ಪ್ರತಿಯಾಗಿ ಜೆಇ ಸಹ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದಿದ್ದಾರೆಂದು ಆಡಿಯೋ ರೆಕಾರ್ಡ್ ಬಹಿರಂಗ ಪಡಿಸಿದರು. ವಿದ್ಯುತ್ ಸಮಸ್ಯೆಯಿಂದ ರೈತ ಹಾಗು ಅಧಿಕಾರಿ ಇಬ್ಬರಿಗೂ ನೆಮ್ಮದಿ ಇಲ್ಲವಾಗಿದೆ ಎಂದರು.

ಬೇಲೂರು ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ದೇಶಾಣಿ ಆನಂದ್ ಅವರು ಮಾತನಾಡಿ, ಶಾಸಕ ಹೆಚ್.ಕೆ.ಸುರೇಶ್ ಅಧಿಕಾರಿಗಳ ಮೇಲೆ ದರ್ಪ ತೋರಿಸುವುದರಲ್ಲಿಯೇ ಕಾಲ ಕಳೆಯುತ್ತಿದ್ದಾರೆ. ತಾಲ್ಲೂಕಿನಲ್ಲಿ ಅಧಿಕಾರಿಗಳು ನೆಮ್ಮದಿಯಿಂದ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ ಎಂದರು.

ತಾಲ್ಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಹೆಚ್.ಎನ್.ಶರತ್, ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಬಂಡಿಲಕ್ಕನಕೊಪ್ಪಲು ಸುರೇಶ್ ಹಾಜರಿದ್ದರು.

# ಭಕ್ತರ ಇಷ್ಟಾರ್ಥ ನೆರವೇರಿಸುವ ಸ್ವರ್ಣ ಗೌರಮ್ಮ



• ಪ್ರಜೋದಯ ವರದಿ

**ಅರಸೀಕೆರೆ:** ತಾಲ್ಲೂಕಿನ ಮಾಡಾಳು ಗ್ರಾಮದ ಸ್ವರ್ಣಗೌರಮ್ಮ ಕಳೆದ 165 ವರ್ಷಗಳಿಂದ ನೆಲೆಸಿದ್ದು ಭಕ್ತರ ಇಷ್ಟಾರ್ಥ ಈಡೇರಿಸುವ ಮೂಲಕ ಆರಾಧ್ಯ ದೇವತೆಯಾಗಿದ್ದಾಳೆಂದು ಹಾರನಹಳ್ಳಿ ಕೋಡಿಮಠದ ಡಾ.ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ತಿಳಿಸಿದರು.

ಗ್ರಾಮದ ಚನ್ನಬಸವೇಶ್ವರ ಚಿತ್ರ ಮಂದಿರದ ಪಕ್ಕ ಕೋಡಿಮಠ ಮಹಾ ಸಂಸ್ಥಾನ ವತಿಯಿಂದ ಸುಮಾರು 1 ಕೋಟಿ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸುತ್ತಿರುವ ದೇವಾಲಯ ವೀಕ್ಷಿಸಿ ಮಾತನಾಡಿದ ಅವರು, 2026ರ ಶ್ರಾವಣ ಪಂಚಮಿ ದಿನ ದೇವಾಲಯ ಲೋಕಾರ್ಪಣೆ ಆಗಲಿದೆ. ಅಷ್ಟರೊಳಗೆ ಕಾಮಗಾರಿ ಪೂರ್ಣಗೊಳಿಸಬೇಕೆಂದು ದೇವಾಲಯದ ಶಿಲ್ಪಿ ಹಾಗು ಗುತ್ತಿಗೆದಾರ ಮುರುಡೇಶ್ವರದ ವಿನಾಯಕ ಅವರಿಗೆ ಸೂಚಿಸಿದರು.

ಮೂಗುತಿ ಸುಂದರಿ ಶ್ರೀ ಸ್ವರ್ಣ ಗೌರಮ್ಮ ದೇವಿಗೆ ಕೋಡಿಮಠದಲ್ಲಿ ಯೋಗ ಸಮಾಧಿಯಲ್ಲಿ ರುವ ಮಹಾ ತಪಸ್ವಿ ಹಾಗು ಪವಾಡ ಪುರುಷ ಶ್ರೀ ಶಿವಲಿಂಗ ಸ್ವಾಮೀಜಿ ಅವರು ಒಂದು ಕೋಟಿ ಜಪ ಮಾಡಿ ಸಿದ್ದಿಸಿದ ಬಂಗಾರದ ಮೂಗುತಿ ಆಶೀರ್ವದಿಸಿದ್ದಾರೆ. ಆ ಮೂಗುತಿ ಧಾರಣೆಯಾದರೆ ಸಾಕ್ಷಾತ್ ಪಾರ್ವತಿ ಕರುಣೆ ಎಂಬ ನಂಬಿಕೆಯಿದೆ ಎಂದರು.

ಗೌರಮ್ಮ ದೇವಿ ಸೇವಾ ಸಮಿತಿ ಅಧ್ಯಕ್ಷ ಎಂ.ಎಸ್.ನಟರಾಜು, ಗೌರವಾಧ್ಯಕ್ಷ ಎಸ್.ಮಲ್ಲಿಕಾರ್ಜುನಪ್ಪ, ಕೋಡಿಮಠ ಏಜೆಂಟ್ ಮಹದೇವಪ್ಪ, ಮುಖಂಡರಾದ ಮಾಡಾಳು ಶಿವಲಿಂಗಪ್ಪ, ಎಂ.ಜಿ.ಶಿವಣ್ಣ, ಎಂ.ಸಿ.ಸ್ವಾಮಿ, ಹೊಸಹಳ್ಳಿ ಶಿವಣ್ಣ, ಬಿ.ಎಂ.ಮಲ್ಲಿಕಾರ್ಜುನ್, ನಂಜುಂಡ ಶೆಟ್ರು, ಎಂ.ಟಿ.ಲೋಕೇಶ್, ಕೆ.ಎಸ್. ನಂದನ್, ಎಂ.ಡಿ. ಸೋಮಶೇಖರ್, ಚಂದ್ರಪ್ಪ, ದಾಸಪ್ಪ, ತಿಮ್ಮಯ್ಯ ಇತರರಿದ್ದರು.

# ಡಾ.ರಾಜಕುಮಾರ್ ಕರ್ನಾಟಕದ ಆಸ್ತಿ: ಡಿ.ಸಿ.

» ಮೊದಲನೇ ಪುಟದಿಂದ

ನಯಿಸದೇ ಯುವ ಸಮುದಾಯಕ್ಕೆ ಮಾದರಿಯಾಗಿದ್ದಾರೆಂದರು.

ಜೀವನವನ್ನು ಹೇಗೆ ಹೋರಾಟವಾಗಿ ನಡೆಸಬೇಕೆಂಬುದನ್ನು ಅವರು ತಮ್ಮ ಚಲನಚಿತ್ರಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ಅವರ ಜೀವನವು ಶಿಸ್ತು ಮತ್ತು ಮನುಷ್ಯತ್ವದ ಪಾಠವನ್ನು ನಮಗೆ ಕಲಿಸುತ್ತದೆ. ಅವರು ಹಾಕಿಕೊಟ್ಟ ಆದರ್ಶಗಳನ್ನು ಪಾಲಿಸುವುದು ನಾವೆಲ್ಲರೂ ಅವರಿಗೆ ನೀಡುವ ನಿಜವಾದ ಗೌರವವಾಗಿದೆ ಎಂದು ಹೇಳಿದರು.

ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ ಅವರು ಮಾತನಾಡಿ, ಸಾಧನೆ ಮಾಡಲು ಬಡವರು, ಶ್ರೀಮಂತರು, ಜಾತಿ, ಧರ್ಮ ಯಾವುದು ಬೇಕಿಲ್ಲ. ಛಲವಿದ್ದರೆ ಗುರಿ ತಲುಪಲು ಸಾಧ್ಯವೆಂಬುದಕ್ಕೆ ರಾಜಕುಮಾರ್ ಮಾದರಿ. ಡಾ. ರಾಜಕುಮಾರ್ ಅವರ ಸಿದ್ಧಾಂತಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಮಕ್ಕಳೊಂದಿಗೆ ಕಾರ್ಯಕ್ರಮ ಮಾಡುತ್ತಿರುವುದು ಔಚಿತ್ಯಪೂರ್ಣ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ ಅವರು ಮಾತನಾಡಿ, ರಾಜಕುಮಾರ್ ಅವರು ವಿದ್ಯೆಯಿಂದ ಅಲ್ಲದೆ ವಿನಯದಿಂದ ಡಾಕ್ಟರೇಟ್ ಪದವಿ ಪಡೆದರು. ರಾಜಕುಮಾರ್ ಅವರಿಗೆ ದೊರಕಿರುವ ಪ್ರಶಸ್ತಿಗಳನ್ನು ಗಮನಿಸಿದರೆ ಎಂತಹ ಮಹಾನ್ ಕಲಾವಿದರು ಎಂಬುದು ತಿಳಿಯುತ್ತದೆ. ಅಭಿಮಾನಿಗಳನ್ನು ಕಂಡರೆ ಅಪಾರವಾದ ಪ್ರೀತಿ ತೋರಿಸುತ್ತಿದ್ದ ಡಾ. ರಾಜಕುಮಾರ್ ಅವರು ಅಭಿಮಾನಿಗಳೇ ದೇವರು ಎಂದು ಕರೆಯುತ್ತಿದ್ದರು. ರಾಜಕುಮಾರ್ ಅವರ ನಟನೆ ಮುಂದಿನ ಪೀಳಿಗೆಗೆ ದಾರಿದೀಪವಾಗಿದೆ ಎಂದು ಹೇಳಿದರು.

ಡಾ. ರಾಜಕುಮಾರ್ ಅಭಿಮಾನಿಗಳ ಸಂಘದ ಜಿಲ್ಲಾಧ್ಯಕ್ಷ ಬಾಳ್ಳು ಗೋಪಾಲ್ ಅವರು ಮಾತನಾಡಿ, ರಾಜಕುಮಾರ್ ಅವರು ವಿದ್ಯಾಭ್ಯಾಸಕ್ಕೆ, ಆಶ್ರಮಗಳಿಗೆ ಹಾಗು ವೃದ್ಧಾಶ್ರಮಗಳಿಗೆ ಸಹಾಯ ಮಾಡುತ್ತಿದ್ದರು. ಕನ್ನಡ ನೆಲ, ಜಲ, ಭಾಷೆಗೆ ಯಾವುದೇ ರೀತಿ ಧಕ್ಕೆ ಬಂದರು ಸದಾ ಹೋರಾಟಕ್ಕೆ ಮುನ್ನೆಯಲ್ಲಿ ಇರುತ್ತಿದ್ದರು. ಅವರು ನಟ ಮಾತ್ರ ಅಲ್ಲದೆ ಆದರ್ಶ ವ್ಯಕ್ತಿಯಾಗಿದ್ದರು. ಡಾ. ರಾಜಕುಮಾರ್ ಅವರು ದುಡ್ಡಿಗಾಗಿ ಎಂದು ಸಹ ಕೆಲಸ ಮಾಡಿಲ್ಲ, ಸಮಾಜದ ಒಳಿತಿಗಾಗಿ ಸೇವೆಯನ್ನು ಮಾಡುತ್ತಿದ್ದರೆಂದರು.

ಗಾಯಕರಾದ ವಿಜಯ್ ಕುಮಾರ್ ಹಾಗು ಚೈತ್ರ ಅವರು ರಾಜಕುಮಾರ್ ಅವರ ಅಭಿನಯದ ಚಲನಚಿತ್ರ ಗೀತೆಗಳನ್ನು ಹಾಡಿ ರಂಜಿಸಿದರು. ಪ್ರಾಂಶುಪಾಲ ಡಿ.ಎಸ್.ರಾಜು, ಕಲಾವಿದ ಬಿ.ಟಿ. ಮಾನವ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕಿ ಮೀನಾಕ್ಷಮ್ಮ, ಉಪನ್ಯಾಸಕ ದೇವರಾಜು ಮತ್ತಿತರರಿದ್ದರು.

# ಮೇ 5ರ ಬಳಿಕ ಜಿಲ್ಲೆಗೆ ಕೇಂದ್ರ ಅರಣ್ಯ ಸಚಿವರ ಭೇಟಿ

• ಪ್ರಜೋದಯ ವರದಿ

**ಆಲೂರು:** ಮಲೆನಾಡು ಭಾಗದಲ್ಲಿ ಹೆಚ್ಚಿರುವ ಕಾಡಾನೆ ಸಮಸ್ಯೆ ಕುರಿತು ಕೇಂದ್ರ ಅರಣ್ಯ ಸಚಿವರ ಗಮನಕ್ಕೆ ತಂದಿದ್ದು, ಹಾವಳಿ ಪ್ರದೇಶಗಳಿಗೆ ಮೇ 5ರ ಬಳಿಕ ಭೇಟಿ ನೀಡಲಿದ್ದಾರೆಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ತಿಳಿಸಿದರು.



ತಾಲ್ಲೂಕಿನ ಹುಣಸವಳ್ಳಿ ಗ್ರಾಮದಲ್ಲಿ ನಡೆದ ಶ್ರೀ ಗೋಪಾಲಕೃಷ್ಣಸ್ವಾಮಿ ದೇವಾಲಯದ ಪುನರ್ ಪ್ರತಿ ಷ್ಠಾಪನಾ ಸಮಾರಂಭದಲ್ಲಿ ಮಾತನಾಡಿದ ಅವರು, ಹಲವು ದಶಕಗಳಿಂದ ಈ ಭಾಗದಲ್ಲಿ ನಡೆಯುತ್ತಿರುವ ಕಾಡಾನೆ ಹಾಗು ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಸಚಿವರೊಂದಿಗೆ ಸಮಾಲೋಚನೆ ನಡೆಸಿದ್ದೇನೆ. ಸಮಸ್ಯೆ ಪರಿಹಾರಕ್ಕೆ ಸೂಕ್ತ ಕ್ರಮ ಕೈಗೊಳ್ಳಲು ಮೇ 5ರ ನಂತರ ಕನಕಪುರ ಹಾಗು ಹಾಸನದ ಭಾಗಗಳಿಗೆ ಎರಡು ದಿನ ಭೇಟಿ ನೀಡುವುದಾಗಿ ಭರವಸೆ ನೀಡಿದ್ದಾರೆ. ಕಾಡಾನೆ ಸಮಸ್ಯೆ ಸಂಬಂಧ ಮನವರಿಕೆ ಮಾಡಿಕೊಡಲು ಜಿಲ್ಲೆಯ ನಿಯೋಗ ಭೇಟಿ ನೀಡಿದಾಗ ಸಚಿವರೊಂದಿಗೆ ನೇರ ಮಾತುಕತೆ ನಡೆಸಲಾಗಿದೆ ಎಂದು ಹೇಳಿದರು.

ಆಡಳಿತಾರೂಢ ರಾಜ್ಯ ಸರ್ಕಾರ ಬಿಟ್ಟಿ ಯೋಜನೆಗಳನ್ನು ನೀಡುವ ಮೂಲಕ ರಾಜ್ಯವನ್ನು ದಿವಾಳಿ ಅಂಚಿಗೆ ತಂದು ನಿಲ್ಲಿಸಿದೆ. ಏಳೂವರೆ ಲಕ್ಷ ಕೋ. ರೂ. ಸಾಲ ಮಾಡಿರುವ ರಾಜ್ಯ ಸರ್ಕಾರ ಪ್ರತಿಯೊಬ್ಬರ ತಲೆ ಮೇಲೆ 1 ಲಕ್ಷ ರೂ. ಸಾಲ ಹೊರಿಸಿದ್ದಾರೆ. ಮತ ಪಡೆದು ಈ ರೀತಿಯ ಬಿಟ್ಟಿ ಯೋಜನೆಗಳನ್ನು ನೀಡಿರುವ ಈ ಸರ್ಕಾರಕ್ಕೆ ನೀವು ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಬೇಕು. ಈ ಭಾಗದ ಶೀತಪೀಡಿತ ಗ್ರಾಮಗಳ ಪುನರ್ವಸತಿಗಾಗಿ ಮುಂದಿನ ದಿನಗಳಲ್ಲಿ ನಮ್ಮ ಸರ್ಕಾರ ಬಂದಾಗ ಕ್ರಮ ಕೈಗೊಳ್ಳಲಾಗುವುದಾಗಿ ಭರವಸೆ ನೀಡಿದರು.

ಪಟ್ಟಣದ ರೈಲ್ವೆ ನಿಲ್ದಾಣದಲ್ಲಿ ರೈಲು ನಿಲುಗಡೆಯನ್ನು ರದ್ದುಪಡಿಸಿರುವುದು ನಮ್ಮ ಗಮನಕ್ಕೆ ಬಂದಿದೆ. ಕೇಂದ್ರ ರೈಲ್ವೆ ಸಚಿವರೊಂದಿಗೆ ಚರ್ಚಿಸಿ ಶೀಘ್ರ ನಿಲುಗಡೆಗೆ ಕ್ರಮ ಕೈಗೊಳ್ಳುತ್ತೇನೆ. ಈ ಭಾಗದ ಜನರ ಆಶೀರ್ವಾದದಿಂದ ಹೆಚ್.ಡಿ.ದೇವೇಗೌಡರು ರಾಜಕೀಯವಾಗಿ ಇಲ್ಲಿಯ ತನಕ ಬೆಳೆ ದಿದ್ದು, ನಿಮ್ಮೆಲ್ಲರ ಋಣ ನಮ್ಮ ಮೇಲಿದೆ. ಮುಂದಿನ ದಿನಗಳಲ್ಲಿ ನಿಮ್ಮ ಋಣ ತೀರಿಸಲುಶ್ರಮಿಸುವುದಾಗಿ ತಿಳಿಸಿದರು.

ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರು ಮಾತನಾಡಿ, ರೈತರು ಬಡವರ್ಗದವರ ಅಭಿವೃದ್ಧಿಗಾಗಿ ಹಗಲಿ ರುಳು ಶ್ರಮಿಸುತ್ತಿರುವ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಜನಪರ ಕಾಳಜಿ ಹೊಂದಿರುವ ವ್ಯಕ್ತಿಯಾಗಿದ್ದಾರೆ. ಈ ಭಾಗದ ಕಾಡಾನೆ ಸೇರಿ ವಿವಿಧ ಸಮಸ್ಯೆಗಳನ್ನು ಪರಿಹರಿಸುವ ಭರವಸೆ ನೀಡಿದ್ದು, ಶೀಘ್ರ ಎಲ್ಲಾ ಸಮಸ್ಯೆಗಳು ಪರಿಹಾರ ಕಾಣಲಿವೆ ಎಂದು ಭರವಸೆ ನೀಡಿದರು.

ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಕೆ.ಎಸ್.ಮಂಜೇಗೌಡ, ಜೆಡಿಎಸ್ ಮುಖಂಡ ಜಿ.ಟಿ.ದೇವೇಗೌಡ, ಒಕ್ಕಲಿಗರ ಸಂಘದ ನಿರ್ದೇಶಕ ರಘುಗೌಡ, ಹುಣಸವಳ್ಳಿ ಹಾಗು ಸುತ್ತಮುತ್ತಲ ಗ್ರಾಮಸ್ಥರು ಹಾಜರಿದ್ದರು.

## ಆನೆ ಕಾರ್ಯಪಡೆಗೆ 13 ಹೊಸ ವಾಹನಗಳ ಬಲ

» ಮೊದಲನೇ ಪುಟದಿಂದ

ವುದರಿಂದ ಕಾಫಿ, ಮೆಣಸು, ಬಾಳೆ ತೋಟಗಳು ಕಾಡಾನೆಗಳ ಪಾಲಾಗುತ್ತಿರುವುದರಿಂದ ರೈತರು ಭಾರೀ ನಷ್ಟ ಅನುಭವಿಸುವಂತಾಗಿದೆ. ಬೆಳೆ ಉಳಿಸಿಕೊಳ್ಳಲು ರಾತ್ರಿ ಇಡೀ ಕಾವಲು ಕಾಯಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಇದೀಗ ಇಟಿಎಫ್ ಸಿಬ್ಬಂದಿಗೆ ಹೆಚ್ಚಿನ ವಾಹನ ಸೌಲಭ್ಯ ಸಿಕ್ಕಿರುವುದರಿಂದ ಅರಣ್ಯ ಸಿಬ್ಬಂದಿ ಕಾಡಾನೆಗಳು ಎಲ್ಲಿವೆ ಎಂಬ ಮಾಹಿತಿಯನ್ನು ನೀಡುವ ಜೊತೆಗೆ ಜನಸಾಮಾನ್ಯರಿಗೆ ತುರ್ತು ಮಾಹಿತಿ ನೀಡಲು ಅನುಕೂಲವಾಗಲಿದೆ.

ಈ ಹೊಸ ವಾಹನಗಳು ಜಿಲ್ಲೆಯ ಕಾಡಾನೆ ಸಮಸ್ಯೆಗೆ ಎಷ್ಟು ಮಟ್ಟಿಗೆ ಪರಿಹಾರ ನೀಡಲಿವೆ, ತಕ್ಷಣದ ಪ್ರತಿಕ್ರಿಯೆ ಮತ್ತು ಜನಜಾಗೃತಿ ಹೆಚ್ಚಿಸುವಲ್ಲಿ ಯಾವ ರೀತಿ ಪರಿಣಾಮಕಾರಿಯಾಗಲಿ ಎಂಬುದು ಯಕ್ಷ ಪ್ರಶ್ನೆಯಾಗಿದೆ. ಹೊಸ ವಾಹನಗಳೊಂದಿಗೆ ಆನೆ ಕಾರ್ಯಪಡೆ ಚುರುಕುಗೊಳ್ಳಬೇಕೆಂಬುದು ಜನರ ಒತ್ತಾಯ.

# ಮನೆ ಬೀಗ ಮುರಿದು ನಗದು, ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಬೇಲೂರು:** ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ಹಿಂಬಾಗಿಲ ಮೂಲಕ ಒಳ ಪ್ರವೇಶಿಸಿರುವ ಕಳ್ಳರು 3.50 ಲಕ್ಷ ರೂ. ನಗದು ಹಾಗು 12 ಗ್ರಾಂ ಚಿನ್ನಾಭರಣ ಕದ್ದಿರುವ ಘಟನೆ ಪಟ್ಟಣದ ಗುರಪ್ಪಗೌಡರ ಬೀದಿಯಲ್ಲಿ ನಡೆದಿದೆ.

ನಿವಾಸಿ ರಮೇಶ್ ಅವರು ಮದುವೆ ನಿಮಿತ್ತ ಏ.19ರಂದು ಕುಟುಂಬ ಸಮೇತ ಕೆ.ಆರ್. ಪೇಟೆಗೆ ತೆರಳಿದ್ದರು. ಮೂರು ದಿನಗಳ ಬಳಿಕ ವಾಪಾಸ್ ಬಂದಾಗ ಮನೆ ಹಿಂಭಾಗ ನಿಲ್ಲಿಸಿದ್ದ ಸ್ಕೂಟರ್ ಹಿಂದಕ್ಕೆ ಎಳೆದು ನಿಲ್ಲಿಸಿದ್ದು ಗೊತ್ತಾಗಿದೆ. ಬಾಗಿಲು ತೆಗೆದು ಒಳಗೆ ನೋಡಿದಾಗ ಹಿಂಬಾಗಿಲ ಬೀಗ ಮುರಿದಿರುವುದು ತಿಳಿದಿದೆ.

ಬೀರುವಿನಲ್ಲಿಟ್ಟಿದ್ದ 12 ಗ್ರಾಂ ತೂಕದ ಚಿನ್ನಾಭರಣ, 2 ಲಕ್ಷ ರೂ., ಸ್ಟೀಲ್ ಗೋಲ್ಕದ ಡಬ್ಬಿಯಲ್ಲಿದ್ದ 1.50 ಲಕ್ಷ ರೂ. ಹಾಗು 1 ಬೆಳ್ಳಿಯ ಉಂಗುರ, 1 ಬೆಳ್ಳಿಯ ಸರ, 4 ಬೆಳ್ಳಿ ಬಳೆ, ಮಕ್ಕಳ 2 ಉಡುದಾರ ಸಹ ಕದ್ದಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ತಣ್ಣೀರುಹಳ್ಳ ಮಠದಲ್ಲಿ ಮಹನೀಯರ ಜಯಂತ್ಯೋತ್ಸವ

• ಪ್ರಜೋದಯ ವರದಿ

**ಹಾಸನ:** ನಗರದ ತಣ್ಣೀರುಹಳ್ಳ ಮಠದ ಶಿವಲಿಂಗಸ್ವಾಮೀಜಿ ರಂಗ ಮಂದಿರದಲ್ಲಿ ಬಸವಣ್ಣನವರ 896ನೇ ಜಯಂತೋತ್ಸವ, ತ್ರಿವಿಧ ದಾಸೋಹಿ ಶ್ರೀ ಶಿವಕುಮಾರ ಸ್ವಾಮೀಜಿ ಯವರ 119ನೇ ಜಯಂತ್ಯೋತ್ಸವ, ಶ್ರೀ ಶಿವಲಿಂಗಸ್ವಾಮೀಜಿಯ 92ನೇ ಜಯಂತೋತ್ಸವ ಏ.26 ರಂದು ನಡೆಯಲಿದೆ ಎಂದು ಮಠದ ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಐಸಾಮಿಗೌಡ ಅವರು ತಿಳಿಸಿದರು.



ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 10ಕ್ಕೆ ಶ್ರೀ ವಿಜಯ ಕುಮಾರ ಸ್ವಾಮೀಜಿಯ ನಿರಂಜನ ನಿರಾಭಾರಿ ಜಂಗಮ ಪಟ್ಟಾಧಿಕಾರದ 56ನೇ ಮಾಸದ ಕಾರ್ಯಕ್ರಮ ಮತ್ತು ಶಿವಲಿಂಗಸ್ವಾಮೀಜಿ ದಾಸೋಹ ಭವನ ಉದ್ಘಾಟನೆ, ಎಂ.ಎಸ್. ನಾಗೇಂದ್ರ ಅವರ ಜ್ಞಾಪಕಾರ್ಥವಾಗಿ ನಿರ್ಮಿಸಿರುವ ಗುರುಭವನ ಉದ್ಘಾಟನೆ ಹಾಗು ಧಾರ್ಮಿಕ ಸಮಾರಂಭ ನಡೆಯಲಿದೆ ಎಂದು ಹೇಳಿದರು.

ದಾಸೋಹ ಭವನವನ್ನು ಸುತ್ತೂರು ಶ್ರೀ ವೀರಸಿಂಹಾಸನಾಧೀಶ್ವರ ಜಗದ್ಗುರು, ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಉದ್ಘಾಟಿಸುವರು. ಗುರು ಭವನವನ್ನು ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗಸ್ವಾಮೀಜಿ ನೆರವೇರಿಸುವರು. ಶ್ರೀ ಚನ್ನಬಸವ ಸ್ವಾಮೀಜಿ, ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ, ಸಿದ್ಧಮಲ್ಲ ಸ್ವಾಮೀಜಿ, ಧರ್ಮರಾಜೇಂದ್ರ ಸ್ವಾಮೀಜಿ, ಸೋಮಶೇಖರಶಿವಾಚಾರ್ಯ ಸ್ವಾಮೀಜಿ, ಶಂಭುನಾಥ ಸ್ವಾಮೀಜಿ, ತಣ್ಣೀರುಹಳ್ಳ ಮಠದ ವಿಜಯ ಕುಮಾರ ಸ್ವಾಮೀಜಿ ಸಾನಿಧ್ಯ ವಹಿಸುವರೆಂದು ಹೇಳಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸಮಾರಂಭದ ಉದ್ಘಾಟನೆ ನೆರವೇರಿಸುವರು. ಶಾಸಕ ಹೆಚ್.ಪಿ.ಸ್ವರೂಪ್ ಅಧ್ಯಕ್ಷತೆ ವಹಿಸುವರು. ಬೆಂಗಳೂರಿನ ಖ್ಯಾತ ವಕೀಲರಾದ ವಿಶ್ವನಾಥ್ ಹಿರೇಮಠ್, ನಿವೃತ್ತ ಐಎಎಸ್ ಅಧಿಕಾರಿ ಡಾ.ಸೋಮಶೇಖರ್ ಉಪನ್ಯಾಸ ನೀಡುವರೆಂದು ತಿಳಿಸಿದರು. ಮಠದ ಪದಾಧಿಕಾರಿಗಳಾದ ಸೋಮೇಶ್, ಮಲ್ಲಿಕಾರ್ಜುನ್, ರೇಣುಕಾ ಪ್ರಸಾದ್, ಬಿ.ಎಸ್.ಕಾಂತರಾಜು, ಬಿ.ಪಿ.ಸೋಮಣ್ಣ ಇದ್ದರು.

# ನಾಳೆ ದಾಸಿಮಯ್ಯ ಜಯಂತಿ, ಭವನ ಉದ್ಘಾಟನೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ದೇವಾಂಗ ಸಂಘದ ನೂತನ ಸಭಾಂಗಣ ಉದ್ಘಾಟನೆ ಹಾಗು ಆದ್ಯ ವಚನಕಾರ ದೇವರ ದಾಸಿಮಯ್ಯ ಅವರ ಜಯಂತಿ ಕಾರ್ಯಕ್ರಮ ಏ.26 ರಂದು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ದೇವಾಂಗ ಸಂಘದ ಅಧ್ಯಕ್ಷ ವಿ.ಎ. ನಂಜುಂಡಸ್ವಾಮಿ ಅವರು ತಿಳಿಸಿದರು.



ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 8.30ಕ್ಕೆ ನೂತನ ಸಭಾಂಗಣ ಉದ್ಘಾಟನೆ ನಡೆಯಲಿದೆ. ಬೆಳಿಗ್ಗೆ 9.30ಕ್ಕೆ ದೇವಾಂಗ ಸಂಘದಿಂದ ಮೆರವಣಿಗೆ ಆರಂಭವಾಗಿ ನಗರದ ವಲ್ಲಭ್ ಬಾಯಿ ರಸ್ತೆ ಯಲ್ಲಿರುವ ಬನಶಂಕರಿ ದೇವಾಂಗ ಸಂಘದವರೆಗೆ ಸಾಗಲಿದೆ. ಮೆರವಣಿಗೆಯಲ್ಲಿ ಸಾಂಪ್ರದಾಯಿಕ ವಾದ್ಯಗೋಷ್ಠಿ, ಧಾರ್ಮಿಕ ಘೋಷಣೆಗ ಳೊಂದಿಗೆ ವಿಶೇಷ ವೈಭವ ಸೃಷ್ಟಿಯಾಗಲಿದೆ ಎಂದು ಹೇಳಿದರು.

ಬನಶಂಕರಿ ದೇವಾಂಗ ಸಂಘದ ಸಭಾಂಗಣದಲ್ಲಿ ಧಾರ್ಮಿಕ, ಸಾಂಸ್ಕೃತಿಕ ಹಾಗು ಸಮಾಜ ಜಾಗೃತಿ ಕಾರ್ಯಕ್ರಮಗಳು ನಡೆಯಲಿವೆ. ದೇವಾಂಗ ಜಗದ್ಗುರು ಹಂಪೆ ಹೇಮಕೂಟ ಗಾಯತ್ರಿ ಪೀಠದ ಶ್ರೀ ದಯಾನಂದಪುರಿ ಸ್ವಾಮೀಜಿ ಅವರು ಸಾನಿಧ್ಯ ವಹಿಸಿ ಆಶೀರ್ವಚನ ನೀಡಲಿದ್ದಾರೆ. ರಾಜ್ಯಸಭಾ ಸದಸ್ಯ ಕೆ. ನಾರಾಯಣ್ ಅವರು ನೂತನ ಸಭಾಂಗಣ ಉದ್ಘಾಟಿಸ ಲಿದ್ದು, ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಘನ ಉಪಸ್ಥಿತಿ ವಹಿಸಲಿದ್ದಾರೆ. ಮಾಜಿ ಶಾಸಕ ಪ್ರೀತಮ್ ಜೆ.ಗೌಡ ಸೇರಿ ಹಲವಾರು ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆಂದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ತಹಶೀಲ್ದಾರ್ ಗೀತಾ, ಮಹಾನಗರ ಪಾಲಿಕೆ ಆಯುಕ್ತ ಕೃಷ್ಣಮೂರ್ತಿ, ರಾಜ್ಯ ದೇವಾಂಗ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ವಿವಿಧ ಜಿಲ್ಲಾ ಘಟಕಗಳ ಮುಖಂಡರು ಹಾಗೂ ಸಮಾಜದ ಹಿರಿಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರೆಂದು ತಿಳಿಸಿದರು. ಪದಾಧಿಕಾರಿಗಳಾದ ಆನಂದ್, ಪ್ರಕಾಶ್, ಶಿವರುದ್ರಪ್ಪ, ರಾಜಶೆಟ್ಟಿ, ಮನೋಹರ್, ಕೃಷ್ಣಶೆಟ್ಟಿ ಇದ್ದರು.

# ಅರೇಹಳ್ಳಿ ಹೋಬಳಿಗೆ ಫಿಜಾ ಲುಖ್ಮಾನ್ ಟಾಪರ್

• ಪ್ರಜೋದಯ ವರದಿ



**ಅರೇಹಳ್ಳಿ:** ಬೇಲೂರು ತಾಲ್ಲೂಕು ಅರೇಹಳ್ಳಿಯ ಹಿರಾ ಪಬ್ಲಿಕ್ ಶಾಲೆಯ ಫಿಜಾ ಲುಖ್ಮಾನ್ ಶೇ.98.08 ಫಲಿತಾಂಶದೊಂದಿಗೆ ಹೋಬಳಿಗೆ ಮೊದಲ ಸ್ಥಾನ ಪಡೆದಿದ್ದಾರೆ.

ಶಾಲೆಗೆ ಶೇ.100 ಫಲಿತಾಂಶ ಲಭಿಸಿದೆ. ಮೊಹಮ್ಮದ್ ಲುಖ್ಮಾನ್ ಅವರ ಪುತ್ರಿ ಫಿಜಾ ಲುಖ್ಮಾನ್ ಹೋಬಳಿಯ ಟಾಪರ್ ಆಗಿ ಹೊರ ಹೊಮ್ಮಿದ್ದಾರೆ. ಹಿರಾ ಪಬ್ಲಿಕ್ ಶಾಲೆಯ ಆಡಳಿತ ಮಂಡಳಿಯು ಎಲ್ಲಾ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರಿಗೆ ಅಭಿನಂದನೆ ಸಲ್ಲಿಸಿದೆ.

## ಬ್ಯಾಕರವಳ್ಳಿ ಮೊರಾರ್ಜಿ ಶಾಲೆಗೆ ಶೇ.100ರಷ್ಟು ಫಲಿತಾಂಶ

**ಸಕಲೇಶಪುರ:** ತಾಲ್ಲೂಕಿನ ಬ್ಯಾಕರವಳ್ಳಿ ಗ್ರಾಮದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯು 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ದಾಖಲಿಸಿದೆ. ಈ ವರ್ಷ ಒಟ್ಟು 44 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅದರಲ್ಲಿ 29 ಬಾಲಕರು ಮತ್ತು 15 ಬಾಲಕಿಯರು ಇದ್ದರು. ಎಲ್ಲರೂ ಉತ್ತೀರ್ಣರಾಗುವ ಮೂಲಕ ಶಾಲೆಗೆ ಹೆಮ್ಮೆ ತಂದಿದ್ದಾರೆ. ಸೋನಾಲಿ 625ಕ್ಕೆ 600, ದರ್ಶನ್ 596, ಸ್ನೇಹ 596 ಅಂಕ ಪಡೆದುಕೊಂಡಿದ್ದಾರೆ.

# ಅರಸೀಕೆರೆಯಲ್ಲಿ ಮಾಡೆಲ್ ಎಕ್ಸಿ ಮಿಷನ್ ಉದ್ಘಾಟನೆ

• ಪ್ರಜೋದಯ ವರದಿ

**ಅರಸೀಕೆರೆ:** ಪೂರ್ವಸಿದ್ಧತೆ ಎಂಬುದು ವಿದ್ಯಾರ್ಥಿ ಜೀವನದಲ್ಲಿ ಪರೀಕ್ಷೆಗೂ ಮುನ್ನ ನಡೆಸುವ ಸಿದ್ಧತೆ ಮಾತ್ರವಲ್ಲ ಬದುಕಿನದ್ದಕ್ಕೂ ಎದುರಾಗುವ ಸವಾಲುಗಳ ಸನ್ನಿವೇಶವನ್ನು ಎದುರಿಸಲು ಸಹ ಪೂರ್ವಸಿದ್ಧತೆ ಎಂಬ ಅಸ್ತ್ರ ಮಾತ್ರ ನಿಮ್ಮನ್ನು ಪಾರು ಮಾಡುವ ಸಾಧನ ಎಂದು ಅನಂತ ಸಮೂಹ ಶಿಕ್ಷಣ ಸಂಸ್ಥೆಗಳ ಚೇರ್ಮನ್ ಆರ್.ಅನಂತ ಕುಮಾರ್ ಅವರು ಹೇಳಿದರು.



ನಗರದ ಅನಂತ ನರ್ಸಿಂಗ್ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಮಾಡೆಲ್ ಎಕ್ಸಿ ಮಿಷನ್ ಉದ್ಘಾಟಿಸಿ ಮಾತನಾಡಿದ ಅವರು, ವೈದ್ಯಕೀಯ ಲೋಕದಲಾಗುತ್ತಿರುವ ಆವಿಷ್ಕಾರಗಳ ಬಗೆ ಅರಿವು ಹಾಗೂ ಅವುಗಳನ್ನು ಬಳಸುವ ವಿಧಾನ ಚಿಕಿತ್ಸೆಗೆಂದು ಬರುವ ರೋಗಿಗಳೊಂದಿಗೆ ನಡೆದುಕೊಳ್ಳುವ ರೀತಿ ಮತ್ತು ನೀತಿ ನಿಮ್ಮನ್ನು ಉನ್ನತಸ್ಥಾನಕ್ಕೆಕೊಂಡೊಯ್ಯುತ್ತದೆಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಎಕ್ಸಿ ಮಿಷನಲ್ಲಿ ನರ್ಸಿಂಗ್ ವಿದ್ಯಾರ್ಥಿಗಳು ಪ್ರದರ್ಶಿಸಿದ ಮಾಡೆಲ್‌ಗಳ ಬಗ್ಗೆ ವಿದ್ಯಾರ್ಥಿ ಗಳಿಂದಲೇ ಕೇಳಿ ತಿಳಿದುಕೊಂಡರು. ವಿದ್ಯಾರ್ಥಿಗಳು ಸಹ ವೈದ್ಯಕೀಯ ಲೋಕದಲ್ಲಿ ಬಳಸುವ ಉಪಕರಣಗಳ ಬಗ್ಗೆ, ದಿನನಿತ್ಯ ಮನುಷ್ಯ ಉಪಯೋಗಿಸುವ ಆಹಾರ ಪದಾರ್ಥಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿದ್ದು ಗಮನ ಸೆಳೆಯಿತು.

ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಾಗುವ ರೋಗಿಯ ಆರೋಗ್ಯ ತಪಾಸಣೆ ಮಾಡುವ ವಿಧಾನ ಚುಚ್ಚುಮದ್ದು ಸೇರಿ ಮಾತ್ರೆ ಮತ್ತು ಔಷಧಿಗಳನ್ನು ತೆಗೆದುಕೊಳ್ಳುವ ವಿಧಾನ ಹೀಗೆ ಹಲವು ಮಾಡಲ್‌ಗಳನ್ನು ಪ್ರದರ್ಶಿಸಿದ ನರ್ಸಿಂಗ್ ವಿದ್ಯಾರ್ಥಿಗಳು ನರ್ಸಿಂಗ್ ಶಿಕ್ಷಣದ ಬಗ್ಗೆ ತಾವು ತಿಳಿದುಕೊಂಡಿರುವ ವಿದ್ಯೆಯನ್ನು ಮಾಡೆಲ್ ಮೂಲಕ ಪ್ರಸ್ತುತಪಡಿಸಿದ್ದು ವೀಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು.

ಜೆಸಿ ಆಸ್ಪತ್ರೆಯ ನರ್ಸಿಂಗ್ ಆಫೀಸರ್ ಲೋಕೇಶ್ ಅವರು ಮಾತನಾಡಿ, ಆರೋಗ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವುದು ಎಲ್ಲರಿಗೂ ಸಿಗುವ ಅವಕಾಶವಲ. ಇಂತಹ ಸೇವಾಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ದೇವರು ನಮಗೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದು ನಿಸ್ವಾರ್ಥತೆಯಿಂದ ರೋಗಿಗಳ ಸೇವೆಯನ್ನು ಮಾಡಿದರೆ ಅದು ಜನರ ಮೆಚ್ಚುಗೆಗೆ ಮಾತ್ರವಲ್ಲ ಭಗವಂತನ ಮೆಚ್ಚುಗೆಗೂ ಪಾತ್ರವಾಗುತ್ತದೆ ಎಂದರು.

ನಗರದ ಸರ್ಕಾರಿ ಜಯಚಾಮರಾಜೇಂದ್ರ ಆಸ್ಪತ್ರೆಯ ಸಿಬ್ಬಂದಿ ಶಿವಕುಮಾರ್, ನರ್ಸಿಂಗ್ ಯುವ ವಿದ್ಯಾರ್ಥಿಗಳು ಹಾಜರಿದ್ದರು.

## ರಾಜಕುಮಾರ್ ಹುಟ್ಟುಹಬ್ಬದಲ್ಲಿ ಶಾಸಕ ಸಿ.ಎನ್.ಬಾಲಕೃಷ್ಣ

# ಚ.ರಾ.ಪಟ್ಟಣದಲ್ಲಿ ಡಾ.ರಾಜ್, ಪುನೀತ್ ಪುತ್ಥಳಿ ನಿರ್ಮಾಣ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ವರನಟ ಡಾ.ರಾಜಕುಮಾರ್ ಹಾಗು ಪುನೀತ್ ರಾಜಕುಮಾರ್ ಅವರ ಪುತ್ಥಳಿಯನ್ನು ಶೀಘ್ರದಲ್ಲೇ ಪಟ್ಟಣದಲ್ಲಿ ನಿರ್ಮಿಸಲಾಗುವುದೆಂದು ಶಾಸಕ ಸಿ.ಎನ್. ಬಾಲಕೃಷ್ಣ ಅವರು ಹೇಳಿದರು.



ಪಟ್ಟಣದ ಡಾ.ರಾಜಕುಮಾರ್ ಉದ್ಯಾನವನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಡಾ.ರಾಜಕುಮಾರ್ ಹುಟ್ಟುಹಬ್ಬ ಸಮಾರಂಭದಲ್ಲಿ ಮಾತನಾಡಿದ ಅವರು, ಪಟ್ಟಣದ ಸೌಂದರ್ಯವನ್ನು ಹೆಚ್ಚಿಸಲು ಉದ್ಯಾನವನಗಳಿಗೆ ಮಹತ್ವವನ್ನು ನೀಡಲಾಗುತ್ತಿದೆ ಎಂದರು.

ರಾಜಕುಮಾರ್ ಉದ್ಯಾನವನದಲ್ಲಿ ಸಾರ್ವಜನಿಕರು ಮತ್ತು ಮಕ್ಕಳು ವಾಯು ವಿಹಾರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದರು. ಅದನ್ನು ಗಮನಿಸಿದ ಪುರಸಭೆಯ ಹಿಂದಿನ ಆಡಳಿತ ಮಂಡಳಿ ಉದ್ಯಾನವನದಲ್ಲಿ ಮಕ್ಕಳಿಗೆ ಆಟವಾಡಲು ಸಾಮಾಗ್ರಿ ನಿರ್ಮಿಸಲಾಗಿದ್ದು ಪಟ್ಟಣದಲ್ಲೇ ಒಂದು ಸುಸಜ್ಜಿತ ಉದ್ಯಾನವನವಾಗಿ ಮಾರ್ಪಟ್ಟಿದೆ. ಅದಕ್ಕೆ ರಾಜಕುಮಾರ್ ಸಂಘದ ಸದಸ್ಯರು ಕಾಳಜಿಯಿಂದ ಇಂತಹ ಸುಂದರ ಉದ್ಯಾನವನ ನಿರ್ಮಾಣ ಮಾಡಲು ಸಾಧ್ಯವಾಗಿದೆ ಎಂದು ತಿಳಿಸಿದರು.

ಸಂಘದ ಅಧ್ಯಕ್ಷ ಪುಟ್ಟಣ್ಣ ಪಟ್ಟಣದ ಪ್ರಮುಖ ಸ್ಥಳದಲ್ಲಿ ರಾಜಕುಮಾರ್ ಹಾಗು ಪುನೀತ್ ರಾಜಕುಮಾರ್ ಅವರ ಪುತ್ಥಳಿ ನಿರ್ಮಾಣ ಮಾಡಬೇಕೆಂದು ಮನವಿ ಸಲ್ಲಿಸಿದ್ದು ಅದಕ್ಕೆ ಪೂರಕವಾಗಿ ಶೀಘ್ರದಲ್ಲೇ ಕಾಮಗಾರಿ ಪ್ರಾರಂಭಿಸಲಾಗುವುದು. ಉದ್ಯಾನವನಕ್ಕೆ ವಿದ್ಯುತ್ ದೀಪ, ಕುಡಿಯುವ ನೀರು ಹಾಗು ಅರಳಿಕಟ್ಟೆಗೆ ಕಟ್ಟೆಯನ್ನು ಕಟ್ಟಿಕೊಡಲು ಮನವಿ ಮಾಡಿದ್ದು ಅದನ್ನು ಕೂಡ ಪೂರ್ಣಗೊಳಿಸಲಾಗುವುದೆಂದರು.

ಡಾ.ರಾಜಕುಮಾರ್ ಅಭಿಮಾನಿಗಳ ಸಂಘದ ತಾಲ್ಲೂಕು ಅಧ್ಯಕ್ಷ ಪುಟ್ಟಣ್ಣ ಗೋಕಾಕ್ ಅವರು ಮಾತನಾಡಿ, ರಾಜಕುಮಾರ್ ಕುಟುಂಬಕ್ಕೂ ಹಾಗು ಚನ್ನರಾಯಪಟ್ಟಣಕ್ಕೂ ಅವಿನಾಭಾವ ಸಂಬಧವಿದೆ. ಗೋಕಾಕ್ ಚಳವಳಿ ಪ್ರಾರಂಭದಲ್ಲಿ ಪಟ್ಟಣದ ಹಳೆ ಬಸ್ ನಿಲ್ದಾಣದಲ್ಲಿ ರಾಜಕುಮಾರ್ ಭಾಷಣ ಮಾಡಿದ್ದರು. ರಾಜಕುಮಾರ್ ಕೇವಲ ನಟರಲ್ಲ ಅವರು ಕನ್ನಡ ಭಾಷೆಗೆ ಬಹಳಷ್ಟು ಪ್ರಾಮುಖ್ಯತೆಯನ್ನು ನೀಡುತ್ತಿದ್ದರು. ಅಂತಹ ಮೇರು ನಟರ ಹುಟ್ಟು ಹಬ್ಬವನ್ನು ಆಚರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಮುಂದಿನ ಪೀಳಿಗೆಗೆ ರಾಜಕುಮಾರ್ ಅವರ ಆದರ್ಶಗಳನ್ನು ಹೇಳುವ ಮೂಲಕ ಅವರ ಸರಳತೆಯನ್ನು ಮೈಗೂಡಿಸಿಕೊಳ್ಳಬೇಕು ಅವರಂತಹ ಮೇರು ನಟರನ್ನು ಪಡೆದ ಕನ್ನಡಿಗರರ ನಾವೇ ಧನ್ಯರೆಂದರು.

ಡಾ.ರಾಜಕುಮಾರ್ ಸಂಘದ ಜಿಲ್ಲಾ ಗೌರವಾಧ್ಯಕ್ಷ ಬಾಳ್ಳುಗೋಪಾಲ್ ಅವರು ಮಾತನಾಡಿ, ರಾಜಕುಮಾರ್ ಕೇವಲ ತಮ್ಮ ಕುಟುಂಬಕ್ಕಾಗಿ ಮೀಸಲಿದ್ದವರಲ್ಲ. ಅವರು ಇಡೀ ಕರ್ನಾಟಕದ ಆಸ್ತಿ. ಸಮಾಜಕ್ಕೋಸ್ಕರ ಸಾಕಷ್ಟು ಕೆಲಸಗಳನ್ನು ಮಾಡಿದ್ದು ಹಾಸನದ ಆದಿಚುಂಚನಗಿರಿ ಶಾಖಾ ಮಠ ಹಾಗು ಕಲ್ಯಾಣ ಮಂಟಪ ನಿರ್ಮಾಣ ಅರ್ಥಕ್ಕೆ ನಿಂತಿದ್ದ ಸಂದರ್ಭದಲ್ಲಿ ರಾಜಕುಮಾರ್ ದೇಣಿಗೆ ಸಂಗ್ರಹಿಸಿ ಕಟ್ಟಡಕ್ಕೆ ನೆರವಾಗಿದ್ದರು ಎಂದರು.

ಡಿವೈಎಸ್ಪಿ ಕುಮಾರ್, ಸಾಹಿತಿ ಹೊನ್ನಶೆಟ್ಟಿಹಳ್ಳಿ ಗಿರಿರಾಜ್, ಪುರಸಭಾ ಮಾಜಿ ಅಧ್ಯಕ್ಷ ಕೋಟೆ ಮೋಹನ್, ಬನಶಂಕರಿ ರಘು, ಸದಸ್ಯರಾದ ಕವಿತಾ ರಾಜಣ್ಣ, ಗಣೇಶ್, ರಾಜಕುಮಾರ್ ಸಂಘದ ಸದಸ್ಯರಾದ ರಾಮಚಂದ್ರು, ದಿನೇಶ್, ಮಹೇಶ್, ರೇವಣ್ಣಪ್ಪ, ರುದ್ರೇಶ್, ತೀರ್ಥ, ಪುರುಷೋತ್ತಮ್ ಇತರರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

C M Y K C M Y K C M Y K C M Y K